ಸಂಪುಟ : 9 ಸಂಚಿಕೆ 37 ಪುಟ : 4 ಬೆಲೆ: 3.00 ಶುಕ್ರವಾರ ಮಾರ್ಚ್ 8, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 37 Pages : 4 Price : 3.00 Friday March 8 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25



## ಮಹಾಶಿವರಾತ್ರಿಯ ಶುಭಾಶಯ

ವಿಜಯಸಾಕ್ಷಿ ಪತ್ರಿಕೆಯ ಎಲ್ಲ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಹಾಗೂ ಹಿತೈಷಿಗಳಿಗೆ ಮಹಾಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು

– ಸಂಪಾದಕರು

## ಬಿಡುವು

ಮಹಾ ಶಿವರಾತ್ರಿಯ ನಿಮಿತ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು ನೀಡಲಾಗಿದ್ದು ಮಾ. 9ರ ಶನಿವಾರದ ಸಂಚಿಕೆ ಪ್ರಕಟಗೊಳ್ಳುವುದಿಲ್ಲ.

ಓದುಗರು, ಚಂದಾದಾರರು, ಜಾಹಿರಾತುದಾರರು, ಏಜೆಂಟರು ಹಾಗೂ ಅಭಿಮಾನಿಗಳು ಎಂದಿನಂತೆ ಸಹಕರಿಸಲು ವಿನಂತಿ.

–ವ್ಯವಸ್ಥಾಪಕರು

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಅವಳಿ ನಗರದಲ್ಲಿ ಮಾರ್ಚ್ 8ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 27ರಲ್ಲಿ ಸ್ಟೇಡಿಯಂ, ಮಾಳಗೊಂಡ, ವಾಟವೇ ಅವರ ಲೈನ್, ಹುಬ್ಬಳ್ಳಿಮಠ ಲೈನ್, ಮರಾಠಿ ಮಾಸ್ತರ್ ಲೈನ್, ಸಜ್ಜನ ಕುಲಕರ್ಣಿ ಲೈನ್, ನಂದೀಶ್ವರ ಮಠ ಹಿಂದಿನ ಭಾಗ, ಕಾತರಕಿ ಚಾಳ ಭಾಗ–1,2, ಶಿವಪ್ಪಗೌಡ್ರ ಲೈನ್, ಡಾ॥ ಜೋಶಿ ಲೈನ್, ಕುರಡಗಿ ದವಾಖಾನಿ ಭಾಗ–1,2 ಮಲ್ಲಾಡದ ಲೈನ್, ವೆಂಕಟೇಶ ಟಾಕೀಸ್ ರಸ್ತೆ, ವಾರ್ಡ್ ನಂ. 4ರಲ್ಲಿ ಕಣವಿ ಪ್ಲಾಟ್, ಬಿ.ಎಸ್.ಎನ್.ಎಲ್. ಆಫೀಸ್, ಹುಯಿಲಗೋಳ ರಸ್ತೆ, ಮಂಜುನಾಥ ನಗರ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 19, 20, 25, 21 ರಹಮತ ನಗರ ಭಾಗ–1,2,3,4, ಶರೀಫಜ್ಜನ ಕಟ್ಟಿ, ಗೌಳಿಯವರ ಲೈನ್, ಹಾಳದಿಬ್ಬ, ಕಲಬಂಡಿಯವರ ಲೈನ್, ಕರಿದೇವರ ಗುಡಿ, 2ನಂ ಶಾಲೆಯ ಕೆಲವು ಉಳಿದ ಭಾಗಗಳು.

ಗದಗ–ಬೆಟಗೇರಿ ನಗರಸಭೆಯ ವ್ಯಾಪ್ತಿಯಲ್ಲಿ ನೀರಿನ ಪೂರೈಕೆಯಲ್ಲಿ ಯಾವುದೇ ತೊಂದರೆ ಉಂಟಾದಲ್ಲಿ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ: 08372–278504 ಗೆ ಕರೆ ಮಾಡಿ ತಮ್ಮ ದೂರನ್ನು ದಾಖಲಿಸಬಹುದಾಗಿದೆ. ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸಲು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೋಂಟದಾರ್ಯ ಮಠದಲ್ಲಿ ಮಹಾಶಿವರಾತ್ರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಲಿಂಗಾಯತ ಪ್ರಗತಿಶೀಲ ಸಂಘದ ಆಶ್ರಯದಲ್ಲಿ ಮಾರ್ಚ್ 8ರ ಸಂಜೆ 7.30 ಗಂಟೆಗೆ ಎಡೆಯೂರು ಜಗದ್ಗುರು ತೋಂಟ–ದಾರ್ಯ ಮಠದಲ್ಲಿ ಮಹಾಶಿವರಾತ್ರಿ ಕಾರ್ಯಕ್ರಮ ಜರುಗಲಿದೆ. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ವಹಿಸಲಿದ್ದಾರೆ.

ಖ್ಯಾತ ಸಂಗೀತಗಾರರಾದ ಪಂಡಿತ ಬಾಲಚಂದ್ರ ನಾಕೋಡ ಹುಬ್ಬಳ್ಳಿ ಮತ್ತು ಬಾಲಕಲಾವಿದೆ ಕುಮಾರಿ ಸ್ಥಾಯಿ ರಾಘವೇಂದ್ರ ನಾಕೋಡ ಹಾಗೂ ತಂಡದವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ. ದಾಸೋಹ ಭಕ್ತಿಸೇವೆಯನ್ನು ಮಲ್ಲಿಕಾರ್ಜುನ ಗಂ. ಬುಳ್ಳಾನವರ ದಂಪತಿಗಳು ಗದಗ ಇವರು ವಹಿಸಿಕೊಂಡಿದ್ದಾರೆಂದು ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಶ್ರೀಸಿದ್ಧೇಶ್ವರ ಪಂಚಗ್ರಹ ಗುಡ್ಡದ ಹಿರೇಮಠಕ್ಕೆ ಬ್ರಹ್ಮ ರಥ ಸಮರ್ಪಣೆ

# ಕೂಡಿ ಬಾಳುವುದೇ ನಮ್ಮ ಸಂಸ್ಕೃತಿ

■ ವಿಜಯಸಾಕ್ಷಿ ಸುದ್ದಿ, ನರಗುಂದ

ಹಜರತ್ ಮೆಹಬೂಬಸುಭಾನಿ ದರ್ಗಾದಿಂದ ನಿರ್ಮಿಸಿರುವ ಧ್ವಜಾಯಿ ಶೈಲಿಯ ಬ್ರಹ್ಮ ರಥವನ್ನು ವಿವಿಧ ಮಠಾಧೀಶರು, ಮೌಲ್ವಿಗಳ ಸಮ್ಮುಖದಲ್ಲಿ ವಿಶೇಷ ಪೂಜೆ, ಪುನಸ್ಕಾರ ಸಲ್ಲಿಸುವುದರ ಮೂಲಕ ಅದ್ದೂರಿ ಕುಂಭಮೇಳ ಮೆರವಣಿಗೆಯೊಂದಿಗೆ ಹಿಂದೂ–ಮುಸ್ಲಿಂ ಭಾವೈಕ್ಯತೆಯಿಂದ ಶ್ರೀಸಿದ್ಧೇಶ್ವರ ಪಂಚಗ್ರಹ ಗುಡ್ಡದ ಹಿರೇಮಠಕ್ಕೆ ಗುರುವಾರ ಶ್ರದ್ಧಾ ಭಕ್ತಿಯಿಂದ ಶಾಸ್ತ್ರೋಕ್ತವಾಗಿ ಸಮರ್ಪಿಸಲಾಯಿತು.

ನಗರದ ಅರ್ಭಾಣ ಬಡಾವಣೆಯಿಂದ ಶಿವಾಜಿ ವರ್ತುಲ, ಬಸವೇಶ್ವರ ವೃತ್ತ, ಸರ್ವಜ್ಞ ಸರ್ಕಲ್, ಗಾಂಧಿ ಚೌಕ್‌ನ ಪ್ರಮುಖ ಮಾರ್ಗಗಳ ಮೂಲಕ ಪಂಚಗ್ರಹ ಗುಡ್ಡದ ಹಿರೇಮಠದವರೆಗೆ 501 ಮುತ್ತೈದೆಯರಿಂದ ಕುಂಭಮೇಳ, ಜಾಂಜ್, ಕೋಲಾಟ, ಭಜನಾ ಸಂಗೀತ, ಮಜಲು, ಡಿಜೆ, ಕೊಣ್ಣೂರಿನ ಮಹಿಳಾಡೊಳ್ಳು ಕುಣಿತ, ಜಗ್ಗಲಗಿ ಮೇಳಗಳು ಮೆರವಣಿಗೆಗೆ ವಿಶೇಷ ಮೆರಗು ನೀಡಿದವು. ಕಾರ್ಯಕ್ರಮದ ಧರ್ಮಸಭೆಯಲ್ಲಿ ಭೈರನಹಟ್ಟಿ ಶಾಂತಲಿಂಗ ಶ್ರೀಗಳು ಮಾತನಾಡಿ, ಭಾರತ ಬಹುಜಾತಿ, ಜನಾಂಗ, ಧರ್ಮಗಳನ್ನು ಹೊಂದಿರುವ ಬಹುತ್ವ ರಾಷ್ಟ್ರವಾಗಿದೆ. ನರಗುಂದ ಈ ಹಿಂದೆ ಬ್ರಿಟಿಷರು ಹಾಗೂ ಸರ್ಕಾರದ ವಿರುದ್ಧ ಸಿಡಿದೆದ್ದಾಗ ಬಂಡಾಯಕ್ಕೆ ಸಾಕ್ಷಿಯಾಗಿತ್ತು. ಆದರೀಗ ಬಾಬುಸಾಬ ಶರಣರಿಂದ ಪ್ರತಿಯೊಬ್ಬರೂ ಏಕತ್ವದಿಂದ ಬದುಕುವ ಭಾವೈಕ್ಯತೆ ಕ್ರಾಂತಿಗೆ ಸಾಕ್ಷಿಯಾಗಿರುವುದು ಅತ್ಯಂತ ಹೆಮ್ಮೆಯ ವಿಚಾರ. ನಮ್ಮ ನಾಡಿನ ಸಂಸ್ಕೃತಿ ಕೂಡಿ ಬಾಳುವುದಾಗಿದೆ. ಸಂತ ಶಿಶುನಾಳ ಶರೀಫ, ಗುರು ಗೋವಿಂದ ಭಟ್ಟರಂತೆ ಸಮಾಜದ ಪ್ರತಿಯೊಬ್ಬರೂ ಭಾವೈಕ್ಯತೆಯಿಂದ ಬದುಕಬೇಕು ಎಂದು ಆಶೀರ್ವಚನ ನೀಡಿದರು.



ಗುಡ್ಡದ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿ, ಮನುಷ್ಯ ಹುಟ್ಟುವಾಗ ಇಂತದ್ದೇ ಜಾತಿ, ಧರ್ಮದಲ್ಲಿ ಹುಟ್ಟಬೇಕೆಂದು ಯಾರೂ ಅರ್ಜಿ ಹಾಕಿಕೊಂಡು ಬಂದಿರುವುದಿಲ್ಲ. ಹುಟ್ಟು, ಸಾವು ಯಾರ ಕೈಯಲ್ಲೂ ಇಲ್ಲ. ಆದರೆ, ಇರುವಷ್ಟು ದಿನ ಜೀವನ ಸಾರ್ಥಕಪಡಿಸಿಕೊಳ್ಳಬೇಕಾದರೆ ಸಹಬಾಳ್ವೆಯ ಬದುಕು ನಡೆಸಬೇಕು. ಸಾಮರಸ್ಯವಿಲ್ಲದೆ ಜಗತ್ತಿನಲ್ಲಿ ಏನೂ ಇಲ್ಲ. ಬಾಬುಸಾಬ ಜಮಾದಾರ ಅವರು ನಮ್ಮ ಶ್ರೀಮಠಕ್ಕೆ 4 ವರ್ಷದ ಹಿಂದಯೇ ತೇರು ನೀಡುವ ವಾಗ್ದಾನ ಮಾಡಿದ್ದರು. ಆದರೆ, ಕೋವಿಡ್‌ನಿಂದ ವಿಳಂಬವಾಗಿತ್ತು. ಈಗ ಒಂದು ವರ್ಷದಲ್ಲಿಯೇ ತೇರು ನಿರ್ಮಿಸಿಕೊಟ್ಟಿರುವುದು ಇಡೀ ದೇಶಕ್ಕೆ ಭಾವೈಕ್ಯತೆಯ ಸಂದೇಶ ಸಾರಿದಂತಾಗಿದೆ ಎಂದರು.



ಪತ್ರಿವನಮಠ ಡಾ.ಗುರುಸಿದ್ಧವೀರ ಶಿವಯೋಗಿ ಶಿವಾಚಾರ್ಯರು ಮಾತನಾಡಿ, ನಾಡಿನ ಹಲವಾರು ಶಿವ–ಶರಣರು ಭಾವೈಕ್ಯತೆಯನ್ನೇ ಸಾರಿದ್ದಾರೆ. ಅವರೆಲ್ಲರ ನಿಲುವನ್ನು ಬಾಬುಸಾಹೇಬ ಜಮಾದಾರ ಇಂದಿನ ಕಾಲದಲ್ಲಿ ಮಾಡಿ ತೋರಿಸಿದ್ದಾರೆ. ಬಾಬುಸಾಹೇಬರ ಧಾರ್ಮಿಕ ಸೇವೆ ಪರಿಗಣಿಸಿ, ನಮ್ಮ ಶ್ರೀಮಠದಿಂದ 'ಬಿಲ್ವಶ್ರೀ' ಪ್ರಶಸ್ತಿ ನೀಡಲಾಗುವುದು ಎಂದು ತಿಳಿಸಿದರು.

ಜನಾಬ ಅಕ್ಬರಬೇಗ್ ಮುಲ್ಲಾ ಖುರಾನ ಪಠಣ ಮಾಡಿದರು. ಸಮದ್ ಮುಲ್ಲಾ, ವಿರಕ್ತಮಠದ ಶಿವಕುಮಾರ ಶ್ರೀಗಳು, ಶಿರೋಳದ ಯಚ್ಚರೇಶ್ವರ ಸ್ವಾಮಿಗಳು, ಬನಹಟ್ಟಿ ಸೊಲಬಯ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ಶರಣ ಬಾಬುಸಾಬ ಜಮಾದಾರ, ರಥಶಿಲ್ಪಿ ಗಂಗಾಧರ ಆಚಾರ್ಯ, ಪಟ್ಟಣದ ವಿವಿಧ ಮುಸ್ಲಿಂ ಜಮಾತ್, ಹಿಂದೂ ಗುರು–ಹಿರಿಯರು, ದಾನಿಗಳನ್ನು ಇಮಾಮಸಾಬ ಶರಣರ ಸೇವಾ ಟ್ರಸ್ಟ್ ಕಮಿಟಿಯಿಂದ ಸನ್ಮಾನಿಸಲಾಯಿತು.

ಹುಲಕೋಟಿ ರಾಜೇಶ್ವರಿ ವಸತಿ ಶಾಲೆಯ ಆಡಳಿತಾಧಿಕಾರಿ ರಾಘವೇಂದ್ರ ಶೆಟ್ಟಿ, ಜ್ಯೋತಿಭಾ ಕನ್ಸೆ, ವಿಶ್ವನಾಥ ಸುಬೇದಾರ, ಶಾಂತು ಹೂಲಿ, ಆನಂದ ಜಿರ್ಲಿ, ಸುಭಾಸ ಘೋರ್ಪಡೆ, ಶಿವಶಂಕರ ಗಡಾದ, ಡಾ. ದೀಪ್ತಿ, ಡಾ. ಮನೋಹರ, ಶ್ರೀನಿವಾಸ ಬಳಗಲಿ, ಮಹಮ್ಮದ ನಾಯ್ಕರ, ಕಾಶೀಮಸಾಬ ಜಮಾದಾರ, ಮುತ್ತಪ್ಪ ಚವರದ, ನಜೀರಸಾಬ ನಾಯ್ಕರ, ಪ್ರಕಾಶ ಖಿಳೇಗಾವಿ, ಇತರರು ಉಪಸ್ಥಿತರಿದ್ದರು. ಶಿಕ್ಷಕ ಎಂ.ಎ. ಫಣಿಬಂದ ನಿರ್ವಹಿಸಿದರು.

### ಸ್ಥಗಿತಗೊಂಡಿದ್ದ ಶಾದಿ ಮಹಲ್ ಕಾಮಗಾರಿಗೆ ಮರು ಚಾಲನೆ ನೀಡಿದ ಶಾಸಕ ಜಿ.ಎಸ್. ಪಾಟೀಲ

# ಎಲ್ಲ ಸಮುದಾಯಗಳಿಗೂ ಅನುದಾನ

■ ವಿಜಯಸಾಕ್ಷಿ ಸುದ್ದಿ, ರೋಣ

ಮತಕ್ಷೇತ್ರದಲ್ಲಿನ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸರಕಾರ ಈಗಾಗಲೇ 5 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆಗೊಳಿಸಿದೆ. ಈ ಹಿನ್ನೆಲೆಯಲ್ಲಿ ಇಟಗಿ ಗ್ರಾಮದ ಶಾದಿ ಮಹಲ್ ನಿರ್ಮಾಣಕ್ಕೆ 90 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ಎಂದು ಶಾಸಕ ಹಾಗೂ ರಾಜ್ಯ ಖನಿಜ ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ ಹೇಳಿದರು.

ಅವರು ಇಟಗಿ ಗ್ರಾಮದಲ್ಲಿ ಸ್ಥಗಿತಗೊಂಡಿದ್ದ ಶಾದಿ ಮಹಲ್ ನಿರ್ಮಾಣಕ್ಕೆ 90 ಲಕ್ಷ ರೂಗಳ ಅನುದಾನವನ್ನು ಒದಗಿಸುವ ಮೂಲಕ ಕಾಮಗಾರಿಗೆ ಮರು ಚಾಲನೆ ನೀಡಿ ಮಾತನಾಡಿದರು.

ಈ ಹಿಂದೆ ಕಾಂಗ್ರೆಸ್ ಸರಕಾರ ಇದ್ದ ಸಂದರ್ಭದಲ್ಲಿ ರೋಣ, ಗಜೇಂದ್ರಗಡ, ನರೆಗಲ್ಲ, ಮಾರನಬಸರಿ, ಕೊಟುಮಚಗಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಶಾದಿ ಮಹಲ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ವಿಪರ್ಯಾಸವೆಂದರೆ, ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಶಾದಿ ಮಹಲ್‌ಗಳಿಗೆ ಅನುದಾನ ಒದಗಿಸಲಿಲ್ಲವಾದ್ದರಿಂದ ಕಟ್ಟಡ ಕಾಮಗಾರಿಗಳು ಸ್ಥಗಿತಗೊಂಡಿದ್ದವು. ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದ್ದು, ಸ್ಥಗಿತಗೊಂಡಿದ್ದ ಕಾಮಗಾರಿಗಳಿಗೆ ಅನುದಾನ ನೀಡಿ ಮರು ಚಾಲನೆ ನೀಡಲಾಗಿದೆ ಎಂದರು.



ಧರ್ಮರ ಮಠದ ಷಣ್ಮುಕಪ್ಪಜ್ಜನವರು ಸಾನಿಧ್ಯ ವಹಿಸಿದ್ದರು. ಸಂಗನಗೌಡ ಪಾಟೀಲ, ಬಿ.ಎಂ. ದಂಡಿನ, ಯೂಸುಪ್ ಇಟಗಿ, ಪ್ರಭು ಮೇಟಿ, ಸುಭಾನ ಅರಗಿದ್ದಿ, ಉಮರಫಾರೂಖ ಹುಬ್ಬಳ್ಳಿ, ಇಸ್ಮಾಯಿಲ್ ಹೊರಪೇಟಿ, ಕಾಶೀಮಸಾಬ ದೋಟಿಹಾಳ ಸೇರಿದಂತೆ ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಇಟಗಿ ಗ್ರಾಮಕ್ಕೆ 90 ಲಕ್ಷ, ನರೆಗಲ್ಲ 25 ಲಕ್ಷ, ಮಾರನಬಸರಿ 10 ಲಕ್ಷ, ಬಾಗವಾನ್ ಸಮುದಾಯ ಭವನ ನಿರ್ಮಾಣಕ್ಕೆ 10 ಲಕ್ಷ, ಹರ್ಲಾಪೂರ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ 25 ಲಕ್ಷ ರೂ ಸೇರಿದಂತೆ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಹೆಚ್ಚಿನ ನೆರವನ್ನು ಒದಗಿಸಲಾಗಿದ್ದು, ಇನ್ನೂ ಹೆಚ್ಚಿನ ನೆರವು ನೀಡಲಾಗುವುದು. ಜೊತೆಗೆ ಅಲ್ಪಸಂಖ್ಯಾತರ ವಿದ್ಯಾರ್ಥಿ ವೇತನಕ್ಕೂ ಸಹ ಸರಕಾರ ಚಾಲನೆ ನೀಡಿದೆ ಎಂದ ಶಾಸಕ ಜಿ.ಎಸ್. ಪಾಟೀಲ, ಬರಿಯ ಅಲ್ಪಸಂಖ್ಯಾತ ಸಮುದಾಯವಲ್ಲದೆ ಗಾಣಿಗ, ಪಂಚಮಸಾಲಿ, ಹಾಲುಮತ, ಸವಿತಾ ಸಮಾಜ ಸೇರಿ ಎಲ್ಲ ಸಮುದಾಯಗಳಿಗೆ ಅನುದಾನವನ್ನು ಕಲ್ಪಿಸಲಾಗಿದೆ ಎಂದರು.

### ಮುಂದುವರೆದ ಶಿವಾನಂದ ಬೃಹನ್ಮಠದ ಉತ್ತರಾಧಿಕಾರತ್ವ ವಿವಾದ


# 13 ಜನರಿಗೆ ನೋಟಿಸ್ ಜಾರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶಿವಾನಂದ ಬೃಹನ್ಮಠದ ಪೀಠಾಧಿಪತಿ ಉತ್ತರಾಧಿಕಾರತ್ವದ ವಿವಾದ ಮುಂದುವರೆದಿದ್ದು, ಮಠದ ಆವಾರದಲ್ಲಿ ಜಾತ್ರೆಯ ಸಂದರ್ಭದಲ್ಲಿ ಶಾಂತಿ ಭಂಗ ಉಂಟಾಗಬಹುದಾದ ಸಾಧ್ಯತೆಯ ಹಿನ್ನೆಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ 13 ಜನರ ಮೇಲೆ ತಾಲೂಕಾ ದಂಡಾಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಹಿರಿಯ ಶ್ರೀ ಅಭಿನವ ಶಿವಾನಂದ ಶ್ರೀಗಳು, ಕಿರಿಯ ಶ್ರೀ ಸದಾಶಿವಾನಂದ ಭಾರತಿ ಶ್ರೀಗಳನ್ನು ಜಾತ್ರಾ ಮಹೋತ್ಸವದಲ್ಲಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಇದು ಸಹಜವಾಗಿಯೇ ಕಿರಿಯ ಶ್ರೀಗಳ ಭಕ್ತರಿಗೆ ತೀವ್ರ ಅಕ್ರೋಶವನ್ನುಂಟುಮಾಡಿದೆ.

ರಾಜು ಖಾನಪ್ಪನವರ, ಸಂತೋಷ ಕಬಾಡರ, ಶಿವಾನಂದ ಪಲ್ಲೇದ, ರಾಹುಲ್ ಅರಳಿ, ಮಲ್ಲರಡ್ಡಿ ಲಿಂಗದಳ್ಳಿ, ಅನಿಲ್ ಅಬ್ಬಿಗೇರಿ, ಶಿವಕುಮಾರ ತಡಕೋಡ, ಅಮರನಾಥ ಬೆಟಗೇರಿ, ಮಹೇಶ ರೋಖಡೆ, ಕಿಶನ್ ಮೇರವಾಡೆ, ವಿ.ಎಚ್. ದೇಸಾಯಿಗೌಡ್ರ, ಈರಣ್ಣ ಬಾಳಿಕಾಯಿ, ವೀರಣ್ಣ ಹೇಮಾದ್ರಿ ಇವರ ಮೇಲೆ ದಂಡ ಪ್ರಕ್ರಿಯೆ ಸಂಹಿತೆ ಕಲಂ 107ರ ಅಡಿಯಲ್ಲಿ ಗದಗ ಶಹರ ಪೊಲೀಸ್ ಠಾಣೆಯ ಪಿ.ಎ.ಆರ್ ಸಂಖ್ಯೆ 15/2024ರಂತೆ ನೋಟಿಸ್ ನೀಡಲಾಗಿದ್ದು, ಭಕ್ತರಲ್ಲಿ ಅಸಮಾಧಾನ ಮೂಡಿಸಿದೆ.



ಈ ಬಗ್ಗೆ ಪ್ರತಿಕ್ರಿಯಿಸಿದ ರಾಜು ಖಾನಪ್ಪನವರ, ಮಠ ಯಾವುದೇ ಸ್ವಾಮೀಜಿಗಳಿಗೆ ಸೇರಿದ್ದಲ್ಲ, ಅದು ಭಕ್ತರಿಗೆ ಸೇರಿದೆ. ಭಕ್ತರ ಅಪೇಕ್ಷೆಯಂತೆ ರಥೋತ್ಸವ ಹಾಗೂ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಇಬ್ಬರೂ ಶ್ರೀಗಳನ್ನು ಕುಳ್ಳಿರಿಸಬೇಕು. ಇಲ್ಲವೇ ಸದಾಶಿವಾನಂದ ಸ್ವಾಮೀಜಿ ಭಾವಚಿತ್ರ ಅಥವಾ ಉತ್ಸವ ಮೂರ್ತಿಯನ್ನು ಇರಿಸಿ ಜಾತ್ರೆ ನೆರವೇರಿಸಬೇಕು ಎಂದಿದ್ದಾರೆ.

ಮಾರ್ಚ್ 8ರಂದು ನಡೆಯುವ ರಥೋತ್ಸವದಲ್ಲಿ ಮಠದ ಹಿರಿಯ ಶ್ರೀಗಳು ಕಿರಿಯ ಶ್ರೀಗಳೊಂದಿಗೆ ಪಾಲ್ಗೊಳ್ಳುವದಿಲ್ಲ. ತಾವು ಒಂಟಿಯಾಗಿಯೇ ರಥೋತ್ಸವದಲ್ಲಿ ಕುಳಿತುಕೊಳ್ಳುವದಾಗಿ ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಮತ್ತೆ ವಿವಾದಕ್ಕೆಡೆ ಮಾಡಿಕೊಟ್ಟಿದೆ.

ನ್ಯಾಯಾಲಯದ ಆದೇಶದ ನಡುವೆಯೂ ಹಿರಿಯ ಶ್ರೀಗಳು ಕಿರಿಯ ಶ್ರೀಗಳನ್ನು ಮಠದ ಜಾತ್ರೆಯ ಯಾವುದೇ ಕಾರ್ಯದಲ್ಲಿ ತೊಡಗಿಸಿಕೊಂಡಿರಲಿಲ್ಲ. ಕಿರಿಯ ಶ್ರೀಗಳ ಭಕ್ತರು ಹಿರಿಯ ಶ್ರೀಗಳ ಮನವೊಲಿಸಲು ಪ್ರಯತ್ನಿಸಿದರೂ ಸಹ ಅವರು ಒಪ್ಪಿಗೆ ನೀಡಿರಲಿಲ್ಲ. ಕೊನೆಗೆ ಕಿರಿಯ ಶ್ರೀಗಳ ಭಕ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಉಭಯ ಶ್ರೀಗಳ ಭಕ್ತರ ಸಭೆ ನಡೆಸಿ ನ್ಯಾಯಾಲಯದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸುವದಾಗಿ ಎಚ್ಚರಿಸಿದ್ದರು.

### ಗ್ರಾಮೀಣಾಭಿವೃದ್ಧಿ–ಪಂಚಾಯತ್ ರಾಜ್ ಇಲಾಖೆ, ನರೇಗಾ ಸಿಬ್ಬಂದಿಗಳಿಗೆ ಅಭಿನಂದನಾ ಸಮಾರಂಭ

# ತಮ್ಮ ಕರ್ತವ್ಯಗಳನ್ನರಿತು ಕೆಲಸ ಮಾಡಿ

■ ವಿಜಯಸಾಕ್ಷಿ ಸುದ್ದಿ, ರೋಣ

ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನು ಅರ್ಥ ಮಾಡಿಕೊಂಡು ಉತ್ತಮ ಕೆಲಸ ಮಾಡುವ ಮೂಲಕ ತಾಲೂಕಿನ ಪ್ರಗತಿ ಹಾಗೂ ಕೀರ್ತಿಗೆ ನಿಮ್ಮದೇ ಆದ ಕೊಡುಗೆಯನ್ನು ನೀಡಿ ಎಂದು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ರವಿ ಎ.ಎನ್ ಹೇಳಿದರು.

ಪಟ್ಟಣದ ಗುರು ಭವನದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಹಾಗೂ ನರೇಗಾ ಸಿಬ್ಬಂದಿಗಳಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ವಿವಿಧ ಸಿಬ್ಬಂದಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ರೋಣ ತಾಲೂಕಿನ ಪ್ರಗತಿ ಉತ್ತಮಗೊಳಿಸಲು ನಿಮ್ಮದೇ ಆದ ಕೊಡುಗೆಯನ್ನು ನೀಡುವ ಮೂಲಕ ತಾಲೂಕನ್ನು ಉನ್ನತ ಸ್ಥಾನದಲ್ಲಿ ಇರಿಸಿದ್ದಿರಿ. ನಿಮ್ಮೆಲ್ಲರ ಶ್ರಮ ಮತ್ತು ದುಡಿಮೆಯಿಂದ ನಮ್ಮ ತಾಲೂಕು ಮೇಲ್ಮಟ್ಟದಲ್ಲಿದೆ. ಹಾಗಾಗಿ ನಿಮ್ಮನ್ನು ಗೌರವಿಸುವದು ನಮ್ಮ ಕರ್ತವ್ಯವಾಗಿದೆ. ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವವರಿಗೆ ಒತ್ತಡ ಇರುತ್ತದೆ. ಎಷ್ಟೇ ಒತ್ತಡ ಇದ್ದರೂ ಅದನ್ನು ಬದಿಗೊತ್ತಿ ಒಗ್ಗಟ್ಟಾಗಿ ಕೆಲಸ ಮಾಡಿ, ಜಿಲ್ಲೆಯ ಹಾಗೂ ತಾಲೂಕಿನ ಹಿತದೃಷ್ಟಿಯಿಂದ ಹೊಸ ಆರ್ಥಿಕ ವರ್ಷದಲ್ಲಿ ತಮ್ಮ ಸೇವೆ ಹಾಗೂ ಕಾರ್ಯ ಅವಶ್ಯ ಎಂದರು.



ರೋಣ ತಹಸೀಲ್ದಾರ ನಾಗರಜ್ ಕೆ ಮಾತನಾಡಿ, ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಾರ್ಷಿಕವಾಗಿ ವಿಶೇಷವಾಗಿ ಕಾರ್ಯ ನಿರ್ವಹಿಸಿದವರನ್ನು ಗುರುತಿಸಿ ಅವರನ್ನು ಗೌರವಿಸುವುದು ಉತ್ತಮ ಕಾರ್ಯ. ಇದನ್ನು ತಾ.ಪಂ ಅಧಿಕಾರಿಗಳು ಮಾಡಿದ್ದಾರೆ ಎಂದರು.

ನರೇಗಾ ಯೋಜನೆ ಹಾಗೂ ಪಂಚಾಯತ ರಾಜ್ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಿದ ಪಿಡಿಒ, ಟಿಎಇ, ಡಿಇಒ, ಬಿಎಫ್.ಟಿ, ಜೆಕೆಎಂ, ಸಿಪಾಯಿ, ಬಿಲ್ ಕಲೆಕ್ಟರ್, ವಾಟರಮನ್‌ಗಳಿಗೆ ತಲಾ ಇಬ್ಬರಂತೆ ಹಾಗೂ ತಾ.ಪಂನ ನಾಲ್ವರು ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಪ್ರಾಸ್ತಾವಿಕವಾಗಿ ಸಹಾಯಕ ನಿರ್ದೇಶಕ ರಿಯಾಜ ಖತೀಬ್ (ಗ್ರಾಮೀಣ ಉದ್ಯೋಗ) ಮಾತನಾಡಿದರು. ಸಹಾಯಕ ನಿರ್ದೇಶಕರಾದ (ಪಂಚಾಯತ ರಾಜ್) ಶಿವಯೋಗಿ ರಿತ್ತಿ ಸ್ವಾಗತಿಸಿದರು. ಪಿಡಿಓ ಶಿವನಗೌಡ ಮೇಣಸಗಿ ಹಾಗೂ ಕಾವೇರಿ ಅಸೂಟಿ ಅನಿಸಿಕೆ ವ್ಯಕ್ತಪಡಿಸಿದರು. ಮೇಘರಾಜ ಸಿಂಗ್ರಿ ನಿರೂಪಿಸಿ ವಂದಿಸಿದರು.

ಈ ಸಂದರ್ಭದಲ್ಲಿ ತಾಲೂಕ ಯೋಜನಾಧಿಕಾರಿ ಸಿ.ಎಸ್. ನೀಲಗುಂದ, ತಾ.ಪಂ ವ್ಯವಸ್ಥಾಪಕ ದೇವರಾಜ ಸಜ್ಜನಶೆಟ್ಟರ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಗೀತಾ, ಪಿಡಿಓ ಸಂಘದ ತಾಲೂಕಾಧ್ಯಕ್ಷ ಲೋಹಿತ ಪೂಜಾರ ಸೇರಿದಂತೆ ಪಿಡಿಒಗಳು, ತಾಂತ್ರಿಕ ಸಹಾಯಕರು, ಡಿಇಒಗಳು, ಬಿಎಫ್.ಟಿ, ಗ್ರಾಮ ಕಾಯಕ ಮಿತ್ರರು, ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

## ಸಂಪಾದಕೀಯ

# ಅಧಿಕಾರದ ಅಮಲಿನಲ್ಲಿ ನಾಲಿಗೆ ಹರಿ ಬಿಡಬೇಡಿ

ರಾಜಕಾರಣ ಎಂದರೆ ಆರೋಪ ಪ್ರತ್ಯಾರೋಪ ಸರ್ವೇಸಾಮಾನ್ಯ. ಯಾವುದೇ ಪಕ್ಷದ ಮುಖಂಡ ಇರಲಿ, ಅವರ ವಿರುದ್ಧ ಟೀಕೆ ಟಿಪ್ಪಣಿಗಳನ್ನು ಮಾಡುವುದು ರಾಜಕಾರಣದ ಭಾಗವೇ. ಆದರೆ ಇತ್ತೀಚಿನ ದಿನಗಳಲ್ಲಿ ಟೀಕೆ ಮಾಡುವುದೇ ರಾಜಕಾರಣ ಎನ್ನುವಂತಾಗಿದೆ.

ದಶಕಗಳ ಹಿಂದೆಯೂ ರಾಜಕಾರಣಿಗಳು ಪರಸ್ಪರ ಆರೋಪ ಪ್ರತ್ಯಾರೋಪಗಳನ್ನ ಮಾಡುತ್ತಿದ್ದರು. ಆದರೆ ಆ ಎಲ್ಲ ಟೀಕೆಗಳು ವಿಷಯಾಧಾರಿತವಾಗಿರುತ್ತಿದ್ದವು. ಸಾಮಾಜಿಕವಾಗಿ ತೆಗೆದು-ಕೊಂಡ ನಿರ್ಣಯಗಳನ್ನ ಕಟುವಾಗಿ ಟೀಕಿಸುತ್ತಿದ್ದರು.

ಹೀಗೆ ಟೀಕೆ ಮಾಡಬೇಕಾದರೂ ಅದಕ್ಕೊಂದು ಚೌಕಟ್ಟು ಇರುತ್ತಿತ್ತು. ಆ ಚೌಕಟ್ಟು ಮೀರದಂತೆ, ಸಭ್ಯತೆಯ ಎಲ್ಲೆ ದಾಟಿ ಹೋಗದಂತೆ ಟೀಕೆಗಳು ಕೇಳಿ ಬರುತ್ತಿದ್ದವು. ಆದರೆ ಇವತ್ತು ವಿಷಯಾಧಾರಿತ ಚರ್ಚೆಯು ಇಲ್ಲ, ಇದ್ದರು ಅದನ್ನು ಬಿಟ್ಟು ವ್ಯಕ್ತಿಗತ ಮತ್ತು ಅವಹೇಳನಕಾರಿಯಾಗಿ ಟೀಕೆ ಮಾಡುವುದೇ ರಾಜಕಾರಣವಾಗಿದೆ.

ಅದರಲ್ಲೂ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಕಾಂಗ್ರೆಸ್, ಇನ್ನಿಲ್ಲದಂತೆ ತಿರುಗಿ ಬಿದ್ದಿತು. ಪ್ರಧಾನಿ ಮೋದಿ ವಿರುದ್ಧವಾಗಿ ಕಾಂಗ್ರೆಸ್ ನಾಯಕರು ಬಳಸಿದ ಶಬ್ದಗಳು, ಮಾಡಿದ ಟೀಕೆಗಳನ್ನು ಜನಸಾಮಾನ್ಯರು ಒಪ್ಪಿಕೊಳ್ಳುವುದಿಲ್ಲ.

ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ, ಮೊನ್ನೆಯಷ್ಟೇ ನೀಡಿರುವ ಹೇಳಿಕೆ ಅಸಹ್ಯ ಮೂಡಿಸಿದೆ. ಯಾರಾದರೂ ಬೆಳಗ್ಗೆ ಟಿವಿಯಲ್ಲಿ ನರೇಂದ್ರ ಮೋದಿ ಅವರ ಮುಖ ನೋಡಿದರೆ, ದರಿದ್ರ ಅಂಟಿಕೊಳ್ಳುತ್ತದೆ ಎಂದು ಹೇಳಿಕೆ ನೀಡಿರುವುದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ.

ನರೇಂದ್ರ ಮೋದಿ ಸುಳ್ಳುಗಾರ, ಎರಡು ಕೋಟಿ ಉದ್ಯೋಗ ನೀಡದೆ ವಂಚನೆ ಮಾಡಿದ ಪ್ರಧಾನಿ, ಕಪ್ಪು ಹಣ ಭಾರತಕ್ಕೆ ತರಲಾಗದ ಚೌಕಿದಾರ್ ಎನ್ನುವ ಟೀಕೆಗಳನ್ನು ಒಪ್ಪಿಕೊಳ್ಳಬಹುದು. ಇಲ್ಲಿ ವಿಷಯವನ್ನ ಇಟ್ಟುಕೊಂಡು ಕಟು ಶಬ್ದಗಳಲ್ಲಿ ಪ್ರಧಾನಿಯನ್ನು ಟೀಕೆ ಮಾಡಲಾಗಿದೆ.

ಆದರೆ ಪ್ರಧಾನಿಯ ಮುಖವನ್ನು ನೋಡಿದರೆ ದರಿದ್ರ ಅಂಟುಕೊಳ್ಳುತ್ತದೆ ಎನ್ನುವ ಹೇಳಿಕೆ ಸಭ್ಯತೆಯ ಎಲ್ಲೆ ಮೀರಿದೆ. ಪ್ರಿಯಾಂಕ್ ಖರ್ಗೆ ನೀಡಿದ ಹೇಳಿಕೆ ಒಂದು ಉದಾಹರಣೆ ಅಷ್ಟೇ. ಅನೇಕ ಕಾಂಗ್ರೆಸ್ ನಾಯಕರು ಇಂತಹ ಅಸಂಬದ್ಧ ಹೇಳಿಕೆಗಳನ್ನು ನೀಡಿ ಸುದ್ದಿಯಾಗಿದ್ದಾರೆ. ಅಧಿಕಾರ ಸಿಕ್ಕ ಮಾತ್ರಕ್ಕೆ ಅಸಂಬದ್ಧ ಹೇಳಿಕೆ ನೀಡುವುದನ್ನು ಬಿಟ್ಟು, ವಿಷಯಾಧಾರಿತ ಗಂಭೀರ ಟೀಕೆಗಳಿಗೆ ಮುಂದಾಗಲಿ.

## ಬಿಜೆಪಿ ನೂತನ ಮಂಡಲಾಧ್ಯಕ್ಷರ ನೇಮಕ



**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ಬಿಜೆಪಿ ನೂತನ ಮಂಡಲ ಅಧ್ಯಕ್ಷರಾಗಿ ತಾಲೂಕಿನ ಕೆ.ಕಲ್ಲಹಳ್ಳಿ ಗ್ರಾಮದ ಕೆ.ಲಕ್ಷ್ಮಣ ಅವರನ್ನು ನೇಮಕ ಮಾಡಿ ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಆದೇಶ ಹೊರಡಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸೂಚನೆ ಮೇರೆಗೆ ಸಂಘಟನಾತ್ಮಕ ದೃಷ್ಟಿಯಿಂದ, ಕೆ.ಲಕ್ಷ್ಮಣ ಅವರನ್ನು ನೂತನ ಮಂಡಲ ಅಧ್ಯಕ್ಷರನ್ನಾಗಿ ಹಾಗೂ ಮಂಡಲ ಪ್ರಧಾನ ಕಾರ್ಯದರ್ಶಿಗಳಾಗಿ ಬಾವಿಹಳ್ಳಿ ಎ.ಉದಯಕುಮಾರ ಮತ್ತು ವಡ್ಡಿನ ದಾದಾಪುರದ ಯು.ಎನ್. ಪ್ರವೀಣ್ ಅವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ.

### ಮಹಾ ಶಿವರಾತ್ರಿ ನಿಮಿತ್ತ ವಿಶೇಷ ಲೇಖನ

# ಶಿವ ಶಿವ ಎಂದರೆ ಭಯವಿಲ್ಲ...

ನಮ್ಮ ದೇಶದಲ್ಲಿ ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ಅದರಲ್ಲಿ ಪ್ರಮುಖವಾದ ಹಬ್ಬಗಳಲ್ಲಿ ಮಹಾ ಶಿವರಾತ್ರಿ ಒಂದಾಗಿದೆ. ಈ ಹಬ್ಬವು ಮಾರ್ಚ್ ತಿಂಗಳ ಮಾಘ ಮಾಸದ ತ್ರಯೋದಶಿಯಂದು ಆಚರಿಸಲಾಗುತ್ತದೆ.

ಇಂದು ಶಿವನಿಗೆ ಪ್ರಿಯವಾದ ದಿನ, ಇದುವೇ ಮಹಾ ಶಿವರಾತ್ರಿ ದಿನ. ಈ ಮಹಾಶಿವರಾತ್ರಿಯಂದು ಶಿವನ ನಾಮಸ್ಮರಣೆಯೊಂದಿಗೆ ಜಾಗರಣೆ ಮಾಡುತ್ತಾರೆ ಹಾಗೂ ಉಪವಾಸ ವ್ರತ ಕೈಗೊಳ್ಳುತ್ತಾರೆ. ಶಿವರಾತ್ರಿಯಂದು ಕೈಲಾಸದಲ್ಲಿರುವ ಪರಶಿವನನ್ನು ಜನರು ಭಕ್ತಿಯಿಂದ ಪೂಜಿಸುತ್ತಾರೆ. ಶಂಭೋಶಂಕರನನ್ನು ನೆನೆದು ಜೀವನವನ್ನು ಪಾವನ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಹಬ್ಬಗಳನ್ನು ಹಗಲಿನಲ್ಲಿ ಆಚರಿಸಿದರೆ ಶಿವರಾತ್ರಿಯನ್ನು ರಾತ್ರಿಯಲ್ಲಿ ಆಚರಣೆ ಮಾಡಲಾಗುತ್ತದೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ, ಅಜ್ಞಾನವನ್ನು ಕಳೆದು ಸುಜ್ಞಾನವನ್ನು ಕರುಣಿಸು ಎಂದು ಶಿವನನ್ನು ಬೇಡುವ ಈ ಶುಭಗಳಿಯೇ ಶಿವರಾತ್ರಿ.

ಶಿವನು ಅಜ್ಞಾನದ ಅಂಧಕಾರದಲ್ಲಿ ಸಂಚರಿಸಿ ಸುಜ್ಞಾನದ ಸುಧೆಯನ್ನು ಹರಡುತ್ತಾನೆ ಎಂಬ ನಂಬಿಕೆ ಇದೆ. ಶಿವ ಬಿಲ್ವಪತ್ರ ಪ್ರಿಯ, ಬಿಲ್ವ ಪತ್ರದ ದಳ ಹೃದಯವನ್ನು ಹೋಲುತ್ತದೆ. ಶಿವಲಿಂಗ ಪರಮಾತ್ಮನ ಪ್ರತೀಕ. ಆದ್ದರಿಂದ ಇವೆರಡರ ಸಮ್ಮಿಲನದಿಂದ ಆತ್ಮ ಪರಮಾತ್ಮನಾಗುತ್ತಾನೆ. ಶಿವರಾತ್ರಿ ದಿನ ಶಿವಲಿಂಗಕ್ಕೆ ಬಿಲ್ವಾರ್ಚನೆ ಮಾಡುವುದರಿಂದ ಪಾಪಗಳು ಪರಿಹಾರವಾಗುತ್ತವೆ ಎಂಬ ನಂಬಿಕೆ ಇದೆ.

ಶಿವನು ಸರಳ, ಪ್ರಮಾಣಿಕತೆ ಮತ್ತು ನಿಷ್ಕಲ್ಮಶಗಳ ಪ್ರತಿಕವಾಗಿದ್ದಾನೆ. ಭಕ್ತಿಯಿಂದ



ಧ್ಯಾನ ಮಾಡಿದರೆ ಶಿವನು ಪ್ರಸನ್ನಗೊಳ್ಳುತ್ತಾನೆ ಎಂಬ ನಂಬಿಕೆ ಇದೆ. ಕೈಲಾಸ ವಾಸಿ ಶಿವನಿಗೆ ಅತ್ಯಂತ್ತ ಪ್ರೀತಿಯ ದಿನ ತನನ್ನು ನಿಷ್ಠೆಯಿಂದ ಪೂಜಿಸಿದವರಿಗೆ ಇಷ್ಟಾರ್ಥಗಳನ್ನು ನೀಡುವುದಾಗಿ ಶಿವನು ಪಾರ್ವತಿಯಲ್ಲಿ ಹೇಳಿದ್ದಾನೆ ಎನ್ನುವುದು ಶಿವಪುರಾಣದಲ್ಲಿ ಕಾಣಬಹುದು.

ಪರ್ವತ ರಾಜನ ಮಗಳಾದ ಪಾರ್ವತಿ ಈ ದಿನದಂದು ರಾತ್ರಿಯಿಡೀ ಶಿವನಾಮವನ್ನು ಭಕ್ತಿಯಿಂದ ಪಠಿಸುತ್ತಾ ಶಿವನನ್ನು ಮೆಚ್ಚಿ ವಿವಾಹವಾದ ದಿನ. ಈ ದಿನವನ್ನು ಶಿವಪಾರ್ವತಿ ಕಲ್ಯಾಣೋತ್ಸವ ದಿನ ಎಂದು ಕರೆಯಲಾಗುತ್ತದೆ. ಶಿವನು ರುದ್ರ ತಾಂಡವವಾಡಿದ ರಾತ್ರಿಯೂ ಇದೇ ಎನ್ನಲಾಗಿದೆ.

ದೇವತೆಗಳು ಹಾಗೂ ಅಸುರರು ಸಮುದ್ರ ಮಂಥನ ನಡೆಸಿ ಹಾಲಾಹಲ ಉದ್ಭವಿಸಿದಾಗ ಅದನ್ನು ಶಿವನು ಕುಡಿದ. ವಿಷ ಗಂಟಲೊಳಗೆ ಹೋಗಬಾರದೆಂದು ಪಾರ್ವತಿಯು ಶಿವನ ಗಂಟಲನ್ನು ಬಿಗಿ ಹಿಡಿದು ಇಡೀ ರಾತ್ರಿ ತಡೆದಳು ಎಂದು ಶಿವ ಪುರಾಣದಲ್ಲಿ ಉಲ್ಲೇಖವಿದೆ. ಅಂದಿನಿಂದ ನೀಲಂಕಠ ಎಂಬ ನಾಮಧೇಯವಾಯಿತು. ಶಿವನು ಆಭರಣ ಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ, ಭಸ್ಮ ಪ್ರಿಯನಾಗಿದ್ದಾನೆ. ಭಸ್ಮವನ್ನು ಬಳಿದುಕೊಂಡು ಹುಲಿ ಚರ್ಮವನ್ನು ಸುತ್ತಿಕೊಂಡು ಸ್ಮಶಾನದಲ್ಲಿರುವ ಅಮೋಘ ಶಕ್ತಿಯ ಶಿವನಾಗಿದ್ದಾನೆ.

ಈ ದಿನ ಹೆಣ್ಣುಮಕ್ಕಳು ಶಿವಗುಣರೂಪಿಯಾಗಿ, ಗುಣಗಳುಳ್ಳ ಪತಿಗಾಗಿ ಪಾರ್ಥಿಸುತ್ತಾರೆ. ಹಾಗೆ ಮುತ್ತೈದೆಯರು ಪತಿಯ ಶ್ರೇಯೋಬಿವೃದ್ಧಿಗಾಗಿ ಪೂಜಿಸುತ್ತಾರೆ. ಶಿವರಾತ್ರಿಯಂದು ಶಿವನನ್ನು ಪೂಜಿಸಿದರೆ ಇಷ್ಟಾರ್ಥಗಳು ಈಡೇರಿ ಸುಖ, ಶಾಂತಿ, ನೆಮ್ಮದಿ ಲಭಿಸುತ್ತದೆ ಎಂಬ ನಂಬಿಕೆ ಇದೆ.

ಪ್ರತಿ ವರ್ಷ ಶಿಶಿರ ಋತುವಿನ ಮಾಘ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯಂದು ರಾತ್ರಿ ಸಮಯದಲ್ಲಿ ಶಿವ-ಪಾರ್ವತಿಯರು ಲೋಕ ಸಂಚಾರ ಮಾಡುತ್ತಾ ಶಿವಲಿಂಗಗಳಿಗೆ ಭೇಟಿ ನೀಡಿ ಸಂಕ್ರಮಣಗೊಳಿಸುತ್ತಾರೆ. ಈ ರಾತ್ರಿ ಯಾರು ಶಿವನ ನಾಮ ಜಪ ಮಾಡುತ್ತಾರೊ ಅವರ ಪಾಪ ತೊಳೆದು ಪುಣ್ಯವನ್ನು ಕರುಣಿಸುತ್ತಾನೆ ಎಂಬ ನಂಬಿಕೆ ಇದೆ.

ದೇವರ ದೇವ ಮಹಾದೇವನಾದ ಶಿವನನ್ನು ಬ್ರಹ್ಮ, ವಿಷ್ಣು ಆದಿಯಾಗಿ ದೇವತೆಗಳೆಲ್ಲರೂ ಪೂಜಿಸುತ್ತಾರೆ.

ರಾತ್ರಿಯು ಅಜ್ಞಾನದ ಸಂಕೇತ. ಈ ವೇಳೆ ನಿದ್ದೆ ಮಾಡದೆ ಭಕ್ತಿಯಿಂದ ಪೂಜಿಸಿದರೆ ತಿಳುವಳಿಕೆಯ ಕಡೆ ತಿರುಗಿದಂತೆ. ಜಾಗರಣೆ ಎಂದರೆ ಜಾಗೃತವಾಗಿರುವುದು ಎಂದರ್ಥ. ರಾತ್ರಿ ಎನ್ನುವುದು ತಮೋಗುಣದ ಪ್ರತೀಕವಾಗಿದೆ. ಈ ಸಮಯದಲ್ಲಿ ಎಚ್ಚರವಾಗಿರುವುದರಿಂದ ನಮ್ಮಲ್ಲಿರುವ ಆಲಸ್ಯ, ಅಹಂಕಾರ ಗುಣಗಳು ದೂರವಾಗುತ್ತವೆ.

ಈ ದಿನದಂದು ಕಾಶಿ ವಿಶ್ವನಾಥ, ರಾಮೇಶ್ವರ, ಮಹಾಬಲೇಶ್ವರ, ಗೋಕರ್ಣನಾಥೇಶ್ವರ, ಬನವಾಸಿ ಮಧುಕೇಶ್ವರ, ಮುರುಡೇಶ್ವರ ಹೀಗೆ ರಾಜ್ಯ, ದೇಶಾದ್ಯಂತ ಶಿವಾಲಯಗಳಲ್ಲಿ ೧ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಶಿವನಿಗೆ ಹಾಲು, ಮೊಸರು, ತುಪ್ಪ ಹಾಗೂ ಜೇನು ತುಪ್ಪದಲ್ಲಿ ಅಭಿಷೇಕ ಮಾಡುವ ಪದ್ಧತಿ ಇದೆ. ಈ ದಿನ ಪ್ರತಿಯೊಬ್ಬರೂ ರಾತ್ರಿಯಿಡೀ ಜಾಗರಣೆ ಮಾಡಿ ನಸುಕಿನ ಜಾವದಲ್ಲಿ ಮಡಿಯಿಂದ ಶಿವ ದೇವಾಲಯಗಳಿಗೆ ಹೋಗಿ ಶಿವನಿಗೆ ಪೂಜೆ ಸಲ್ಲಿಸುತ್ತಾರೆ. ಶಿವನು ತನ್ನ ಭಕ್ತರಿಗೆ ಸಕಲ ಇಷ್ಟಾರ್ಥಗಳನ್ನು ಕರುಣಿಸುತ್ತಾನೆ. ಶಿವನು ಈ ಲೋಕದ ಎಲ್ಲ ಜೀವರಾಶಿಗಳಿಗೆ ಸುಖ, ನೆಮ್ಮದಿ, ಸಮೃದ್ಧಿ, ಸಂಪತ್ತು ಕರುಣಿಸಲಿ. ಮಳೆ-ಬೆಳೆ ಚೆನ್ನಾಗಿ ಬರಲಿ ಎಂದು ಶಿವನಲ್ಲಿ ಮತ್ತೊಮ್ಮೆ ಪ್ರಾರ್ಥಿಸೋಣ.



**- ಎಸ್.ಕೆ. ಆಡಿನ.**
ಶಿಕ್ಷಕರು,
ಹೊಳೆಆಲೂರು.

### ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದಿಂದ ರಾಜ್ಯಮಟ್ಟದ ಖಾಲಿ ಗಾಡಾ ಓಡಿಸುವ ಸ್ಪರ್ಧೆ

# ಗ್ರಾಮೀಣ ಕ್ರೀಡೆಗಳು ನಿರಂತರವಾಗಲಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜೋಡೆತ್ತಿನ ಗಾಡಾ ಸ್ಪರ್ಧೆಯಿಂದ ರೈತರಲ್ಲಿ ಪರಸ್ಪರ ಸ್ನೇಹ, ಭ್ರಾತೃತ್ವ, ಭಾಂದವ್ಯ, ವಿಚಾರ ವಿನಿಮಯ ಸಾಧ್ಯವಾಗುತ್ತಿದೆ. ಇಂತಹ ಸ್ಪರ್ಧೆಗಳ ಸಂದರ್ಭದಲ್ಲಿ ನೂತನ ಕೃಷಿ ಪದ್ಧತಿ, ಹೊಸ ಸಂಶೋಧನೆ, ಕೃಷಿ ತಳಿ ಬೀಜಗಳು ಸೇರಿ ಕೃಷಿ ಪೂರಕ ವಿಚಾರ ವಿನಮಯಗಳು ನಡೆಯಬೇಕು ಎಂದು ತಾಲೂಕ ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘ ಅಧ್ಯಕ್ಷ ಎಲ್.ಎಸ್. ಅರಳಹಳ್ಳಿ ಹೇಳಿದರು.

ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದಿಂದ ಶಿವರಾತ್ರಿ ಪ್ರಯುಕ್ತ ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಜೋಡೆತ್ತಿನ ಖಾಲಿ ಗಾಡಾ ಓಡಿಸುವ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು.



ರೈತರು ತಮ್ಮ ಜೀವನಾಡಿಯಾದ ಎತ್ತುಗಳೊಂದಿಗೆ ನಿತ್ಯದ ಬದುಕು ಆರಂಭಿಸುತ್ತಾರೆ. ರೈತರು ಪ್ರೀತಿಯಿಂದ ಸಾಕಿದ ಎತ್ತುಗಳಿಗೆ ತರಬೇತಿ ನೀಡಿ ಎತ್ತುಗಳ ಓಟ, ವಿಶೇಷತೆ, ಅಂದ-ಚಂದ, ತಾಕತ್ತನ್ನು ಕಂಡು ಖುಷಿ ಪಡುವುದೇ ರೈತರಿಗೆ ಹಬ್ಬ. ಇಂದಿನ ಮೊಬೈಲ್ ಹಾವಳಿಯಿಂದ ಗ್ರಾಮೀಣ ಕ್ರೀಡೆಗಳು ನಶಿಸುತ್ತಿದ್ದು, ಇಂತಹ ಕಾರ್ಯಕ್ರಮಗಳಲ್ಲಿ ಯುವ ರೈತರ ಮತ್ತು ಸಂಘಟಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಬಳಗದ ಗದಗ ಜಿಲ್ಲಾಧ್ಯಕ್ಷ ಬಸವರಾಜ ಹಿರೇಮನಿ ಮಾತನಾಡಿ, ಕೃಷಿ ಚಟುವಟಿಕೆಗಳ ಬಿಡುವಿನ ವೇಳೆ ಗ್ರಾಮೀಣ ಭಾಗದಲ್ಲಿ ರೈತರು ಸಂತೋಷ-ಸಂಭ್ರಮಕ್ಕಾಗಿ ನಡೆಸುವ ಗಾಡಾ ಓಡಿಸುವ ಸ್ಪರ್ಧೆಗೆ ಬಹುತೇಕ ಎಲ್ಲರೂ ಸಹಾಯ-ಸಹಕಾರ ನೀಡಿರುವುದು ಶ್ಲಾಘನೀಯ ಎಂದರು.

ಕೃಷಿ ಕೆಲಸದ ಜತೆಗೆ ಬಂಡಿ ಓಟಕ್ಕೆ ಅಂತಲೇ ಎತ್ತುಗಳಿಗೆ ಹುರುಳಿ ಕಾಳು, ಜೋಳದ ನುಚ್ಚು, ಹಿಂಡಿ ಸೇರಿ ಪೌಷ್ಠಿಕಾಂಶಭರಿತ ಪದಾರ್ಥಗಳನ್ನ ತಿನ್ನಿಸಿ ಕಟ್ಟುಮಸ್ತಾಗಿ ಬೆಳೆಸಿ, ತರಬೇತಿ ನೀಡಿ ಸ್ಪರ್ಧೆಯ ಅಖಾಡಕ್ಕೆ ತಂದಿದ್ದರು. ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಎತ್ತಿನ ಜೋಡಿಗಳು ಸಂಜೆವರೆಗೂ ಪ್ರದರ್ಶನ ನೀಡಿದವು.

ಸಂಜೆ ಗೆದ್ದ ಜೋಡಿ ಎತ್ತುಗಳಿಗೆ ಪ್ರಥಮ ಹೋಂಡಾ ಬೈಕ್, ದ್ವಿತೀಯ 50 ಸಾವಿರ ರೂ., ತೃತೀಯ ಚತುರ್ಥ ಮತ್ತು ಐದನೇ ಬಹುಮಾನ 40 ಸಾವಿರ ರೂ. ಹೀಗೆ 18 ಬಹುಮಾನ ವಿತರಿಸಲಾಯಿತು.

ಬಳಗದ ರಾಜ್ಯಾಧ್ಯಕ್ಷ ಸುರೇಶ ಗೋಕಾವಿ, ತಾಲೂಕಾಧ್ಯಕ್ಷ ಸುರೇಶ ಹಟ್ಟಿ, ಸಮ್ಮೇದ ಗೋಗಿ, ಆನಂದ ತಟ್ಟಿ, ಮಂಜುನಾಥ ಮುಳಗುಂದ, ಮಹಾಂತೇಶ ಗುದ್ನಾಳ, ಮಂಜುನಾಥ ಶರಸೂರಿ, ಶಿರಾಜ್ ಡಾಲಾಯತ್, ಬಸವರಾಜ ಕಲ್ಲೂರ, ಸಾಗರ ಕಲಾಲ, ನೀಲಪ್ಪ ಬಸಾಪೂರ, ಬಸನಗೌಡ ಪಾಟೀಲ, ಮಹೇಶ ಸೂರಣಗಿ, ಮುದಕನಗೌಡ ಪಾಟೀಲ, ಕೃಷ್ಣ ಲಮಾಣಿ, ಬಸವರಾಜ ಹರಿಜನ ಸೇರಿದಂತೆ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ಸದಸ್ಯರು, ಗ್ರಾಮಸ್ಥರು ಇದ್ದರು.



**■ವಿಜಯಸಾಕ್ಷಿ ಸುದ್ದಿ, ಗದಗ**

ಎನ್.ಎಸ್.ಯು.ಐ ರಾಜ್ಯಾಧ್ಯಕ್ಷ ಕೀರ್ತಿ ಗಣೇಶ್ ಅವರು ದೇವರಾಜ್ ಅರಸು ನಿಗಮದ ಅಧ್ಯಕ್ಷರಾಗಿ ನೇಮಕವಾದ ಹಿನ್ನೆಲೆಯಲ್ಲಿ ಗದಗ ಜಿಲ್ಲಾ ಎನ್.ಎಸ್.ಯು.ಐ ಅಧ್ಯಕ್ಷ ಅಹಮದ್ ಹುಸೇನ್ ಖಾಜಿ ನೇತೃತ್ವದ ನಿಯೋಗ ಅವರನ್ನು ಭೇಟಿ ಮಾಡಿ, ಸನ್ಮಾನಿಸಿ ಶುಭ ಹಾರೈಸಿತು.

# ಸಿ.ಎಸ್. ಪಾಟೀಲ ಶಾಲೆಯಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಜೀವಿಯ ದೇಹ ಹಾಗೂ ಮನಸ್ಸು ಸಂಪೂರ್ಣವಾಗಿ ಸಮತೋಲನದಲ್ಲಿರುವುದೇ ಸದೃಢವಾಗಿದ್ದು, ಆರೋಗ್ಯವೇ ಭಾಗ್ಯವಾಗಿದೆ. ಉತ್ತಮ ಮೌಲ್ಯ, ಸರಿಯಾದ ಜೀವನ ಕ್ರಮಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ಸಂಪನ್ಮೂಲ ವ್ಯಕ್ತಿ ಕೆ.ಎಸ್. ಬೇಲೇರಿ ಹೇಳಿದರು.

ಅವರು ಗದುಗಿನ ಸಿ.ಎಸ್. ಪಾಟೀಲ ಬಾಲಕಿಯರ ಶಾಲೆಯಲ್ಲಿ ಜರುಗಿದ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.



ಉತ್ತಮ ಆರೋಗ್ಯಕ್ಕೆ ಪೂರಕ ವಾತಾವರಣ ನಿರ್ಮಾಣವಾಗಬೇಕು. ಪಾಶ್ಚಿಮಾತ್ಯ ಜೀವನ ಶೈಲಿಯ ಅನುಕರಣೆಯಿಂದಾಗಿ ಅನಾರೋಗ್ಯ ಉಂಟಾಗುತ್ತದೆ. ಹೆಣ್ಣು ಮಕ್ಕಳು ವೈಯುಕ್ತಿಕ ಸ್ವಚ್ಛತೆಯ ಕಡೆ ಹೆಚ್ಚು ಗಮನಹರಿಸಬೇಕು. ಪ್ರತಿನಿತ್ಯ ಸ್ನಾನ, ವ್ಯಾಯಾಮ, ಸರಿಯಾದ ಸಮಯಕ್ಕೆ ನೀರು ಸೇವನೆ, ಹಿತಮಿತ ಆಹಾರ ಸೇವಿಸಬೇಕೆಂದರು.

ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯ ಎಸ್.ಜಿ. ಕೋಲ್ಮಿ ವಹಿಸಿ ಮಾತನಾಡಿದರು. ವೇದಿಕೆಯ ಮೇಲೆ ಮಹೇಶಗೌಡ ಪಾಟೀಲ, ಯು.ಎಸ್. ಗುಂಜಾಳ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ರಾಮಚಂದ್ರ ಹಂಸನೂರ ಸ್ವಾಗತಿಸಿದರು. ಈಶ್ವರ ಗೌಡರ ನಿರೂಪಿಸಿದರು. ಬಸವರಾಜ ಹೊನ್ನಗುಡಿ ವಂದಿಸಿದರು.

# ಗಜೇಂದ್ರಗಡ ತಾಲೂಕಾ ಗಮಕ ಕಲಾ ಪರಿಷತ್ ಉದ್ಘಾಟನೆ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಕುಮಾರವ್ಯಾಸ ವಿರಚಿತ ಗದುಗಿನ ಭಾರತವು ನಡಗುನ್ನಡ ಕಾವ್ಯದ ಶ್ರೇಷ್ಠ ಗ್ರಂಥವಾಗಿದ್ದು, 8842 ಭಾಮಿನಿ ಷಟ್ಪದಿಯಲ್ಲಿರುವ ಪದ್ಯಗಳನ್ನು ಹೊಂದಿದೆ. 10 ಪರ್ವಗಳನ್ನು ಒಳಗೊಂಡು ಸಮಸ್ತ ಕನ್ನಡಿಗರ ಮನೆಮಾತಾಗಿರುವ ಕೃತಿ ಇದಾಗಿದೆ. ಈಗಲೂ ಸಹ ಕನ್ನಡ ನಾಡಿನ ಪ್ರತಿ ಮನೆ ಮನೆಯಲ್ಲಿಯೂ ಸಂಜೆ ದೀಪ ಹಚ್ಚುವ ಹೊತ್ತಿಗೆ ಗೋಧೂಳಿ ಶುಭ ಮುಹೂರ್ತದಲ್ಲಿ ಗಮಕ ವಾಚನ ಮಾಡುವ ಸಂಪ್ರದಾಯಸ್ಥರಿದ್ದಾರೆ ಎಂದು ಕರ್ನಾಟಕ ಗಮಕ ಕಲಾ ಪರಿಷತ್ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಡಾ. ಸಂಗಮೇಶ ತಮ್ಮನಗೌಡ್ರ ಹೇಳಿದರು.

ಅವರು ಇತ್ತೀಚೆಗೆ ಗಜೇಂದ್ರಗಡದ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯ ಸಭಾಭವನದಲ್ಲಿ ನಡೆದ ಗಮಕ ಕಲಾ ಪರಿಷತ್ತು ಗಜೇಂದ್ರಗಡ ತಾಲೂಕಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ವೇದಿಕೆಯಲ್ಲಿ ಗಜೇಂದ್ರಗಡ ತಾಲೂಕಾಧ್ಯಕ್ಷ ಚಂದ್ರಾಮ ಶ್ರೀಪಾದಭಟ್ ಗ್ರಾಮಪುರೋಹಿತ, ಹುಚ್ಚೀರಪ್ಪ ವೀರಪ್ಪ ಈಟಿ ವಿರಚಿತ ತಿರುಗುಣಿಯಲ್ಲಿ ತಿರುಗಿದ ನನ್ನ ಬದುಕು ಕೃತಿಯನ್ನ ಬಿಡುಗಡೆಗೊಳಿಸಿದರು. ಗದಗ ತಾಲೂಕಾಧ್ಯಕ್ಷೆ ನಿರ್ಮಲಾ ತರವಾಡೆ, ಗ್ರಂಥಕರ್ತ ಹುಚ್ಚೀರಪ್ಪ ಈಟಿ, ಅತಿಥಿಗಳಾದ ಈಶ್ವರ ಕುರಿ ಮಾತನಾಡಿದರು.

ಡಾ. ಆರ್.ಎಚ್. ಗಚ್ಚಿನಮಠ, ಆದರ್ಶ ಕುಲಕರ್ಣಿ, ಗುರುಸಿದ್ದಯ್ಯ ಗೊರ್ಜಣ್ಣವರ, ಆಕಾಶ ಬೆಡಗಲ್, ಸಮರ್ಥ ಮಾವಿನಕಾಯಿ, ಇನೂಸಸಾಬ, ಪುನಿತ ಅಂಕದ, ರಂಜಿತಾ ಮಳ್ಳಿ, ಸೋಮಗೊಂಡ, ಶಿವಲೀಲಾ, ಗೋಲಪ್ಪ ಸೋಮಗೊಂಡ, ಆಸಿಯಾ ಕೊಪ್ಪದ ಮುಂತಾದವರು ಉಪಸ್ಥಿತರಿದ್ದರು. ಸಾಹಿತಿ, ಕುಂಚ ಕಲಾವಿದರಾದ ಬಸವರಾಜ ನೆಲಜೇರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

'ರಾಷ್ಟ್ರೀಯ ಅವಿಷ್ಕಾರ' ಅಭಿಯಾನದಡಿ ನಡೆಯುತ್ತಿರುವ ರಸಪ್ರಶ್ನೆ ಸ್ಪರ್ಧೆಯ ಜಿಲ್ಲಾ ಹಂತದಲ್ಲಿ ತಾಲೂಕಿನ ಯಲ್ಲಾಪೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಶೇಖಪ್ಪ ಚ.ಲಮಾಣಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

# ಮಾನವ ವಿಕಾಸದಿಂದ ಅಭಿವೃದ್ಧಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಮಾನವ ವಿಕಾಸವು, ವೈಜ್ಞಾನಿಕ ಮನೋಭಾವನೆ ಹೊಂದಿ ಸದೃಢ ಆರೋಗ್ಯ ಹೊಂದುವಲ್ಲಿ ಗಣನೀಯ ಅಭಿವೃದ್ಧಿಯಾಗಿದೆ ಎಂದು ರಕ್ತ ತಪಾಸಿಗ ಡಾ.ದತ್ತಾತ್ರೇಯ ವೈಕುಂಠೆ ಹೇಳಿದರು.

ಗದುಗಿನ ಸ.ಹಿ.ಪ್ರಾ. ಶಾ. ನಂ-6ರಲ್ಲಿ ವಿದ್ಯಾರ್ಥಿಗಳಿಗೆ ಉಚಿತ ರಕ್ತ ಗುಂಪು ತಪಾಸಣೆ ಮಾಡಿ ಕಾರ್ಡ್ ವಿತರಿಸಿ ಮಾತನಾಡಿದ ಅವರು, ಇಂದು ಮಕ್ಕಳಲ್ಲಿ ಅಪೌಷ್ಠಿಕತೆ ಹಾಗೂ ರಕ್ತಹೀನತೆ ಹೆಚ್ಚಾಗಿ ಕಂಡು ಬರುತ್ತಿದೆ. ಸಮತೋಲಿತ ಆಹಾರ ಸೇವಿಸಬೇಕು ಎಂದರು.

ಶಾಲೆ ನಂ-6 ಹಾಗೂ ಉರ್ದು ಶಾಲೆಯ ಸುಮಾರು 250 ವಿದ್ಯಾರ್ಥಿಗಳಿಗೆ ಉಚಿತ ರಕ್ತತಪಾಸಣೆ ನಡೆಸಿ ರಕ್ತಗುಂಪಿನ ಕಾರ್ಡ್ ವಿತರಿಸಲಾಯಿತು.

ವೇದಿಕೆಯ ಮೇಲೆ ಸಂಪನ್ಮೂಲ ವ್ಯಕ್ತಿ ಕೆ.ಎಸ್. ಬೇಲೇರಿ, ಮುಖ್ಯೋಪಾಧ್ಯಾಯ ಎಸ್.ಜಿ. ಓದನವರ, ಐ.ಟಿ. ಹೊಸಮನಿ ಉಪಸ್ಥಿತರಿದ್ದರು. ಜ್ಯೋತಿ ಬನ್ನಿದಿಣ್ಣಿ, ಚಿನ್ನು ಚವ್ಹಾಣ ಪ್ರಾರ್ಥಿಸಿದರು. ಆರ್.ಕೆ. ಹಿರೇಮಠ ಸ್ವಾಗತಿಸಿದರು. ಈಶ್ವರ ಕಟ್ಟಿಮನಿ ನಿರೂಪಿಸಿದರು. ಬಿ.ಜಿ. ಮಾಗಿ, ಬಿ.ವೈ. ತಳವಾರ ಪರಿಚಯಿಸಿದರು. ಪಿ.ಎಸ್. ಕಳವಾಯಿ ವಂದಿಸಿದರು.

## ತೇಜ ಚನ್ನಯ್ಯ ಹಿರೇಮಠರಿಗೆ ಡಾಕ್ಟರೇಟ್



■ವಿಜಯಸಾಕ್ಷಿ ಸುದ್ದಿ, ಗದಗ

'A Frame Work for Portability and Interoperability in Heterogeneous Cloud Computing Environments' ಕಂಪ್ಯೂಟರ್ ಸೈನ್ಸ್ ಹಾಗೂ ಇಂಜಿನಿಯರಿಂಗ್ ವಿಷಯದ ಮೇಲೆ ಮಹಾಪ್ರಬಂಧವನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಯುಕ್ತ ತೇಜ ಚನ್ನಯ್ಯ ಹಿರೇಮಠ ಇವರಿಗೆ ಡಾಕ್ಟರೇಟ್ ಪದವಿ ಸಂದಿದೆ.

ಇವರು ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಡಾ. ರೇಖಾ ಕೆ.ಎಸ್. ಇವರ ಮಾರ್ಗದರ್ಶನದಲ್ಲಿ ಸತತ ನಾಲ್ಕು ವರ್ಷ ಅಧ್ಯಯನಗೈದಿದ್ದಾರೆ. ತೇಜ ಅವರ ತಂದೆ ಚನ್ನಯ್ಯ ಹಿರೇಮಠ ಇವರು ಶ್ರೀ ತೋಂಟ-ದಾರ್ಯ ಮಠದಲ್ಲಿ ಮ್ಯಾನೇಜರ ಆಗಿ, ಕಾರ್ಯಕರ್ತರಾಗಿ ಸುಮಾರು ಆರು ದಶಕಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಘನತೆವೆತ್ತ ರಾಜ್ಯಪಾಲರಾದ ಥಾವರಚಂದ ಗೆಹ್ಲೋಟ ಇವರ ಸಮ್ಮುಖದಲ್ಲಿ ವ್ಹಿಟಿಯು ಕುಲಪತಿಗಳು ತೇಜ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

### ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮ

# ಮಕ್ಕಳ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳಿಗೆ ಸಂಬಂಧಿಸಿದ ಯೋಜನೆಗಳ ಸಫಲತೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸಾಕಷ್ಟು ಕಾರ್ಯಕ್ರಮ ಕೈಗೊಳ್ಳುತ್ತಿರುವುದು ಶ್ಲಾಘನೀಯವಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಮಕ್ಕಳ ಅಭಿವೃದ್ಧಿ ಹಾಗೂ ಮಕ್ಕಳ ರಕ್ಷಣೆಗಾಗಿ ಸಾಕಷ್ಟು ಯೋಜನೆಗಳಿವೆ. ಅವುಗಳನ್ನು ಮಕ್ಕಳಿಗೆ ತಲುಪಿಸುವ ಕಾರ್ಯವನ್ನು ಸತತವಾಗಿ ಮಾಡುತ್ತ ಬರಲಾಗುತ್ತಿದೆ. ಮಕ್ಕಳು ತಮಗಿರುವ ಹಕ್ಕುಗಳು ಹಾಗೂ ಯೋಜನೆಗಳ ಕುರಿತು ತಿಳಿದುಕೊಂಡಿರಬೇಕು. ಅಂದಾಗ ಮಾತ್ರ ಮಕ್ಕಳು ಉತ್ತಮ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ನಿರೂಪಣಾಧಿಕಾರಿ ರಾಧಾ ಜಿ.ಮಣ್ಣೂರು ನುಡಿದರು.

ನಗರದ ಜಗದ್ಗುರು ತೋಂಟದಾರ್ಯ ಪ್ರೌಢಶಾಲೆಯಲ್ಲಿ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಹಯೋಗದಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, ಪೋಕ್ಸೊ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಆರ್‌ಟಿಇ ಕಾಯ್ದೆ, ಬಾಲಕಾರ್ಮಿಕ ಹಾಗೂ ಭಿಕ್ಷಾಟನೆ ನಿಷೇಧ ಹಾಗೂ ನಿಯಂತ್ರಣ ಕಾಯ್ದೆ, ಮನೋಸಾಮಾಜಿಕ ಸಮಸ್ಯೆಗಳು ಹಾಗೂ ಪರಿಹಾರ ಕುರಿತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.




ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಡಾ. ಸೋಮಶೇಖರ ಬಿಜ್ಜಳ ಮಾತನಾಡಿ, ಮಕ್ಕಳು ಹದಿವಯಸ್ಸಿನಲ್ಲಿ ಆಗುವ ದೈಹಿಕ, ಮಾನಸಿಕ, ಬೌದ್ಧಿಕ ಬದಲಾವಣೆಗಳ ಬಗ್ಗೆ ಮಕ್ಕಳಿಗಿಂತ ತಂದೆ-ತಾಯಿಗಳು ಹೆಚ್ಚಾಗಿ ಕಾಳಜಿ ವಹಿಸಬೇಕು. ಮಕ್ಕಳ ಉತ್ತಮ ಬೆಳವಣಿಗೆಗೆ ತಾಯಿಯ ಗರ್ಭದಿಂದಲೇ ಆರೈಕೆ, ಮುಖ್ಯ ಅನುವಂಶತೆ ಹಾಗೂ ಮಿದುಳಿನ ಬೆಳವಣಿಗೆಗೆ ಅದು ಸಾಕಷ್ಟು ಪರಿಣಾಮಕಾರಿ. ಹೀಗಾಗಿ ಹೆಣ್ಣು ಮಕ್ಕಳು ಗರ್ಭಿಣಿಯಾದಾಗ ಉತ್ತಮ ವಿಚಾರ ಹಾಗೂ ವಾತಾವರಣ ಹೊಂದುವುದು ಅವಶ್ಯಕವಾಗಿದೆ. ಮಗು ಉತ್ತಮ ಬೆಳವಣಿಗೆಗೆ ಪೋಷಕರ ಆರೈಕೆ, ಹಿರಿಯರ ನಡುವಳಿಕೆ, ಕುಟುಂಬದ ವಾತಾವರಣ ಬಹುಮುಖ್ಯ ಎಂದು ಮಕ್ಕಳಿಗೆ ಅರಿವು ಮೂಡಿಸಿದರು.

> ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಅನ್ನಪೂರ್ಣ ಗಾಣಿಗೇರ ಮಾತನಾಡಿ, ಶಾಲಾ ವಿದ್ಯಾರ್ಥಿಗಳೆಲ್ಲ ಉತ್ತಮ ನಡುವಳಿಕೆಯೊಂದಿಗೆ ತಮ್ಮ ಗೌರವ ಕಾಪಾಡಿಕೊಳ್ಳಬೇಕು. ತಮ್ಮ ಭವಿಷ್ಯದ ಕುರಿತು ಕಾಳಜಿ ಉಳ್ಳವರಾಗಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಜಗದ್ಗುರು ತೋಂಟದಾರ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಕೊಟ್ರೇಶ ಮೆಣಸಿನಕಾಯಿ, ರಮೇಶ ಕಳ್ಳಿಮನಿ, ರೂಪಾ ಉಪ್ಪಿನ್, ಲಲಿತಾ ಕುಂಬಾರ, ಬೈಲಪ್ಪಗೌಡ ಮಲ್ಲನಗೌಡ್ರ ಭಾಗವಹಿಸಿದ್ದರು. ರಮೇಶ ಕಳ್ಳಿಮನಿ ಕಾರ್ಯಕ್ರಮ ನಿರೂಪಿಸಿದರು.

### 'ಬೇಂದ್ರೆ ಉಪನ್ಯಾಸ' ಕಾರ್ಯಕ್ರಮದಲ್ಲಿ ಮಹೇಶ್ವರಸ್ವಾಮಿಗಳು ಹೊಸಳ್ಳಿಮಠ

# ಬೇಂದ್ರೆ ಶುದ್ಧ ಆಧ್ಯಾತ್ಮಿಕ ಒಲವುಳ್ಳ ಕವಿ

■ವಿಜಯಸಾಕ್ಷಿ ಸುದ್ದಿ, ಗದಗ

ವರಕವಿ ಬೇಂದ್ರೆ ಕಾಲಾತೀತ ಪ್ರಜ್ಞೆಯುಳ್ಳ ಕವಿಯಾಗಿದ್ದು, ಸರಳ ಆಡು ಭಾಷೆಯಲ್ಲಿ ಕವನ ರಚಿಸುವುದರ ಜೊತೆಗೆ ಅಪಾರ ನೋವು, ಬಡತನದ ಒಗರನ್ನು ಉಂಡು ಸ್ವಾಭಿಮಾನ, ಸ್ವ-ಪ್ರತಿಷ್ಠೆಯಿಂದ ಬದುಕಿ ಆಧ್ಯಾತ್ಮಿಕ ಸಂಪತ್ತನ್ನು ಗಳಿಸಿಕೊಂಡಿದ್ದರು. ತಮ್ಮ ನೋವನ್ನು ತಮ್ಮೊಳಗೇ ನಿವಾರಿಸಿಕೊಳ್ಳುವ ಶುದ್ಧ ಆತ್ಮ ಶಕ್ತಿಯನ್ನು ವರಕವಿ ಬೇಂದ್ರೆ ಬೆಳೆಸಿಕೊಂಡಿದ್ದರು ಎಂದು ಗದುಗಿನ ಅಡವೀಂದ್ರಸ್ವಾಮಿ ಮಠದ ಧರ್ಮದರ್ಶಿಗಳಾದ ವೇ.ಮೂ. ಮಹೇಶ್ವರಸ್ವಾಮಿಗಳು ಹೊಸಳ್ಳಿಮಠ ನುಡಿದರು.

ಮಾಸಿಕ ಶಿವಾನುಭವ ಕಾರ್ಯಕ್ರಮದ 321ನೇ ಉಪನ್ಯಾಸ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಡಾ. ಸಂಗಮೇಶ ತಮ್ಮನಗೌಡ್ರ ಬಹುವರ್ಷಗಳಿಂದ ರಾಮಗಿರಿಯಲ್ಲಿ ವರಕವಿ ಬೇಂದ್ರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಕಟ್ಟಿಕೊಂಡು ಬೇಂದ್ರೆಯವರ ಕಟ್ಟಾ ಅಭಿಮಾನಿಗಳಾಗಿ ಕಳೆದ 24 ವರ್ಷಗಳಿಂದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತ, ಬೇಂದ್ರೆಯವರ ಕುರಿತು ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವವನ್ನು ಬೇಂದ್ರೆ ಸಾಹಿತ್ಯ ಪ್ರಚಾರದ ಮೂಲಕ ಗಳಿಸಿಕೊಂಡವರಾಗಿದ್ದಾರೆ. ಬೇಂದ್ರೆ ಸಾಹಿತ್ಯ ಪ್ರಚಾರದ ಅವರ ಕಾರ್ಯ ಸ್ತುತ್ಯಾರ್ಹವಾದುದು ಎಂದು ನುಡಿದರು.



ಅಕ್ಕಲಕೋಟೆಯ ಗೋಂದವಿಲೇಕರ ಮಹಾರಾಜರು, ಪಾಂಡಿಚೇರಿಯ ಅರವಿಂದ ಆಶ್ರಮದ ಅರವಿಂದರು ಮತ್ತು ಶ್ರೀ ಮಾತಾ, ಪಂಡರಾಪುರದ ಪಾಂಡುರಂಗ ವಿಠಲ ಮತ್ತು ರವೀಂದ್ರನಾಥ ಟ್ಯಾಗೋರ ಅವರ ಅಪ್ಪಟ ಅನುಯಾಯಿಯಾಗಿದ್ದ ವರಕವಿ ಬೇಂದ್ರೆಯವರು ಶುದ್ಧ ಆತ್ಮತತ್ವದಲ್ಲಿ ನಂಬಿಗೆ ಇಟ್ಟು ಇವರನ್ನು ಸ್ಮರಿಸುವ ಹಲವಾರು ಕವನಗಳನ್ನು ರಚಿಸಿದ್ದಾರೆ. ಅವರ ಕಾವ್ಯದ ಸಿಂಹಪಾಲು ಆಧ್ಯಾತ್ಮಿಕ ಗೀತೆಗಳು ನಾಕುತಂತಿ ಕೃತಿಯಲ್ಲಿ ಕಂಡು ಬರುತ್ತವೆ. ಆ ಕವನಗಳನ್ನು ಓದಿದಾಗ ಜೀವಾನಂದ ಮತ್ತು ಆತ್ಮಾನಂದ ಗಳಿಸುವ ಚುಂಬಕ ಶಕ್ತಿ ಅವುಗಳಲ್ಲಿದೆ ಎಂದರು.

> ಶಿವಾನುಭವ ಸಮಿತಿಯ ಅಧ್ಯಕ್ಷ ವ್ಹಿ.ಎಮ್. ಕುಂದ್ರಾಳ ಹಿರೇಮಠರು ಮಾತನಾಡಿ, ಇಂದಿನ ಕಾರ್ಯಕ್ರಮವು ನಮ್ಮ ಶಿವಾನುಭವ ಸಮಿತಿಯಲ್ಲಿಯೇ ಆಯೋಜನೆಗೊಳಿಸಿದ ಕಾರ್ಯಕ್ರಮಗಳಿಗಿಂತ ವಿಶಿಷ್ಟವಾಗಿ ವಾಚನ ಮತ್ತು ಗಾಯನದ ಮರೆಯದ ಕಾರ್ಯಕ್ರಮವಾಗಿದ್ದು, ಡಾ. ಸಂಗಮೇಶ ತಮ್ಮನಗೌಡ್ರ ಬೇಂದ್ರೆಯವರ ಕುರಿತು ವಾಸ್ತವಿಕ ನೆಲೆಗಟ್ಟಿನಲ್ಲಿ ಮಾತನಾಡುವ ಶ್ರೇಷ್ಠ ಸಾಹಿತಿಗಳಾಗಿದ್ದಾರೆ ಎಂದರು.

ಕು.ಸೌಜನ್ಯ ಸಿದ್ರಾಮಯ್ಯ ಕಟಗಿಹಳ್ಳಿಮಠ ಪ್ರಾರ್ಥನೆ ಗೀತೆ ಹಾಡಿದರು. ಅಡವೀಂದ್ರ ಮಠದ ಕಾರ್ಯದರ್ಶಿ ವಿನಾಯಕ ಸಜ್ಜನ ಸ್ವಾಗತಿಸಿದರು. ವೇದಿಕೆಯ ಮೇಲೆ ವ್ಹಿ.ಎಮ್. ಕಾಳಗಿ, ಬಸಲಿಂಗಯ್ಯಶಾಸ್ತ್ರಿಗಳು ಹಿರೇಮಠ, ಜ್ಞಾನ ಯೋಗಕೇಂದ್ರದ ಯೋಗಾದರರು, ಜಲ್ಲಿಗೇರಿಯ ಶರಣಮ್ಮತಾಯಿ ಆಶ್ರಮದ ಚನ್ನಬಸವ ಶರಣರು ಮುಂತಾದವರು ಉಪಸ್ಥಿತರಿದ್ದರು. ವೀರೇಶ್ವರ ಪುಣ್ಯಾಶ್ರಮದ ಗುರುಗಳಾದ ಶ್ರೀಶೈಲ ಚಿಕ್ಕಮಠ, ಸೌಜನ್ಯ ಕಟಗಿಹಳ್ಳಿಮಠ, ತಬಲಾ ಸಾತ್ ನೀಡಿದ ಅಕ್ಷಯ ಜಮಖಂಡಿ ತಮ್ಮ ಸಂಗೀತ ವಾದನ ಮತ್ತು ಗಾಯನದ ಮೂಲಕ ಗಮನ ಸೆಳೆದರು.

ಕಡಕೋಳದ ಕೆ.ಜಿ. ಸೋನಾರ ಬೇಂದ್ರೆ ಸಾಹಿತ್ಯ ಅಭಿಮಾನಿಗಳಾದ ಕೆ.ಎಂ. ಹೊಂಬಾಳಿಮಠ, ಗೀತಾ ಹೂಗಾರ ಮುಂತಾದವರು ಪಾಲ್ಗೊಂಡಿದ್ದರು.

# ಗ್ರಾ.ಪಂ.ಗಳ ಕುಂದು ಕೊರತೆಗಳನ್ನು ನೀಗಿಸುವಂತೆ ಸಚಿವರಿಗೆ ಮನವಿ




■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಗ್ರಾಮ ಪಂಚಾಯಿತಿಗಳ ಕುಂದು-ಕೊರತೆಗಳು ಹಾಗೂ ಅಧಿಕಾರಿಗಳ ನೇಮಕ ಮಾಡುವಂತೆ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆಯವರಿಗೆ ಮುಂಡರಗಿ ತಾಲೂಕಾ ಗ್ರಾ.ಪಂ ಸದಸ್ಯರ ಒಕ್ಕೂಟದ ವತಿಯಿಂದ ಮನವಿ ಸಲ್ಲಿಸಲಾಯಿತು.

ಗದಗ ಜಿಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಗದಗ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಭಾರಿ ಇರುವುದರಿಂದ ಅಭಿವೃದ್ಧಿಗಳು ಕುಂಠಿತವಾಗುತ್ತಿವೆ. 5 ಗ್ರಾಮ ಪಂಚಾಯಿತಿಗಳಿಗೆ ಒಬ್ಬರೇ ಇಂಜಿನಿಯರ್ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ನಿಧಾನವಾಗುತ್ತಿವೆ. ಗ್ರಾಮ ಪಂಚಾಯಿತಿಯಲ್ಲಿ ಮೆಟೀರಿಯಲ್ ಬಿಲ್ಲುಗಳು ತಿಂಗಳಾದರೂ ಕೂಡ ಖಾತೆಗೆ ಜಮಾ ಆಗದೆ ಅಲೆದಾಡುವಂತಾಗಿದೆ. ಈ ಎಲ್ಲ ಕೊರತೆಗಳನ್ನು ನೀಗಿಸಿ, ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಪ್ರಮುಖರಾದ ಗಣೇಶ ಭರಮಕ್ಕನವರ, ಪರ್ವತಗೌಡ ಪಾಟೀಲ, ಶಿವಕುಮಾರ ಬಿ., ಬಹದ್ದೂರ ದೇಸಾಯಿ, ಶಿವಕುಮಾರ ಪಾಟೀಲ, ರವಿ, ಜ.ವಿ. ಭುವನೇಶ್ವರಿ, ಜಗದೀಶ ಪಾಟೀಲ, ಕುಬೇರ ನಾಯಕ, ಧರಂಸಿಂಗ್ ಸೇರಿದಂತೆ ಒಕ್ಕೂಟದ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಶಿಕ್ಷಣದೊಂದಿಗೆ ಸಂಸ್ಕಾರ ನೀಡಿದವರು ಪ್ರಭುಲಿಂಗ ದೇವರು



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯವಾಗಿದೆ. ಶಿಕ್ಷಣದ ಜೊತೆಯಲ್ಲಿ ಉತ್ತಮ ಸಂಸ್ಕಾರ ನಿಡುತ್ತಿರುವ ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರ ಕಾರ್ಯ ಅತ್ಯಂತ ಶ್ಲಾಘನಿಯವಾದದ್ದು ಎಂದು ಹೂವಿನ ಶಿಗ್ಲಿಯ ವಿರಕ್ತಮಠದ ಚನ್ನವೀರಸ್ವಾಮಿಜಿ ಹೇಳಿದರು.

ಅವರು ಸಮೀಪದ ನೀಲಗುಂದ ಗುದ್ನೇಶ್ವರಮಠದಲ್ಲಿ ಮಾಹಾ ಶಿವರಾತ್ರಿ ಅಂಗವಾಗಿ ದಿವ್ಯ ಚೇತನ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿಯೊಂದು ಮಗು ಶಿಕ್ಷಣ ಪಡೆದಾಗ ಮಾತ್ರ ಮಗುವಿನ ಬದುಕು ಸುಂದರವಾಗುವದು. ಇಂತಹ ಗುಣಮಟ್ಟದ ಶಿಕ್ಷಣ ಜೊತೆಗೆ ಒಳ್ಳೆಯ ಸಂಸ್ಕಾರ ನೀಡುವ ಕಾರ್ಯವನ್ನು ನೀಲಗುಂದದ ಗುದ್ನೇಶ್ವರಮಠದ ದಿವ್ಯ ಚೇತನ ಟ್ರಸ್ಟ್ ಮಾಡುತ್ತಿದೆ ಎಂದರು.

ಗದಗ ಡಿಡಿಪಿಐ ಎಂ.ಎ. ರಡ್ಡೇರ ಮಾತನಾಡಿ, ಸಂವಿಧಾನ ಪರಿಚ್ಛೇದ 21ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರತಿಯೊಬ್ಬರು ಜೀವಿಸುವ, ಶಿಕ್ಷಣ ಪಡೆಯುವ ಹಕ್ಕು ಮತ್ತು ಕರ್ತವ್ಯ ನೀಡಿದ್ದಾರೆ. ಮಕ್ಕಳಲ್ಲಿ ಪಾಲಕರು ರಾಷ್ಟ್ರ, ದೇಶ ಪ್ರೇಮ ಬೆಳೆಸಬೇಕು, ಮಕ್ಕಳ ದಿನ ನಿತ್ಯ ಓದಿನ ಕಡೆ ಗಮನ ನೀಡಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಯಲ್ಲಿ ಉತ್ತಮ ಸಂಸ್ಕಾರ ನೀಡಿ ಬೆಳೆಸಬೇಕು ಎಂದರು.

ದಿವ್ಯ ಸಾನಿಧ್ಯವನ್ನು ಶಿಗ್ಲಿ ವಿರಕ್ತಮಠದ ಚನ್ನವೀರಸ್ವಾಮಿಗಳು ವಹಿಸಿದ್ದರು. ನೀಲಗುಂದ ಪ್ರಭುಲಿಂಗ ದೇವರು, ಬಿಇಓ ವಿ.ವಿ. ನಡುವಿನಮನಿ, ಎಂ.ಎಚ್. ಕಂಬಳಿ ಇದ್ದರು.

# ಜೀವನ ದರ್ಶನ ಮಾಸಿಕ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ವಿವೇಕಾನಂದ ನಗರದ ಶ್ರೀಕಾಶಿ ವಿಶ್ವನಾಥ ದೇವಸ್ಥಾನದಲ್ಲಿ 36ನೇ ಜೀವನ ದರ್ಶನ ಮಾಸಿಕ ಕಾರ್ಯಕ್ರಮ ಹಾಗೂ ಮಹಾಶಿವರಾತ್ರಿ ಕಾರ್ಯಕ್ರಮ ಮಾ.8ರಂದು ಸಂಜೆ 6.30ಕ್ಕೆ ವಿವೇಕಾನಂದನಗರದ ಸಭಾ ಭವನದಲ್ಲಿ ಜರುಗಲಿವೆ.

ಪರಮಪೂಜ್ಯ ಶ್ರೀ ಷ.ಬ್ರ. ಗುರು ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಎಂ.ಎನ್. ಕಾಮನಹಳ್ಳಿಯವರು ವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಜಿ.ಬಿ. ಗಾರವಾಡ, ಎಸ್.ಎಸ್. ಗೌಡರ ಅವರನ್ನು ಸನ್ಮಾನಿಸಲಾಗುವುದು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಭಕ್ತಾದಿಗಳು ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಪ್ರಕಟಣೆ ಕೋರಿದೆ.

### ದೇವಗಿರಿಯಲ್ಲಿ ಶ್ರೀ ಗುರು ಪುಟ್ಟರಾಜ ಪುರಸ್ಕಾರ-2024

# ಸುಕ್ಷೇತ್ರ ದೇವಗಿರಿ ಪ್ರವಾಸಿ ತಾಣವಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಲಿಂ. ಪಂ. ಪುಟ್ಟರಾಜರ ಹುಟ್ಟೂರು ದೇವಗಿರಿಯು ಮುಂದಿನ ದಿನಮಾನಗಳಲ್ಲಿ ಪ್ರಸಿದ್ಧ ಪುಣ್ಯಕ್ಷೇತ್ರವಾಗಿ, ಸುಂದರ ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳ್ಳಬೇಕೆಂದು ಶಿರಹಟ್ಟಿಯ ಪೂಜ್ಯ ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಹೇಳಿದರು.

ಅವರು ಗಾನ ಗಂಧರ್ವ ಕಲಾ ಟ್ರಸ್ಟ್ ಗದಗ ಹಾಗೂ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಸಂಗೀತ ಪಾಠಶಾಲೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ ದೇವಗಿರಿ ಇವರ ಸಹಯೋಗದಲ್ಲಿ ಪದ್ಮಭೂಷಣ ಪುಟ್ಟರಾಜ ಗವಾಯಿಗಳವರ ಕಂಚಿನ ಪುತ್ಥಳಿಯ ಪ್ರತಿಷ್ಠಾಪನೆ, ಪಂ.ಪುಟ್ಟರಾಜ ಗವಾಯಿಗಳವರ ಮಠದ ಗೋಪುರಕ್ಕೆ ಕಳಸಾರೋಹಣ, ಪೂಜ್ಯರ 110ನೇ ಜಯಂತ್ಯುತ್ಸವ, ಶ್ರೀ ಗುರು ಪುಟ್ಟರಾಜ ಪುರಸ್ಕಾರ, ಪುಟ್ಟರಾಜ ಸಂಗೀತ ಸಮಾರೋಹ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಸವರಾಜ ಶಿವಣ್ಣನವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಯಲು ರಂಗ ಭೂಮಿಗೆ ಮೇಲ್ಛಾವಣಿ ಹಾಕಿಸುವ ಹಾಗೂ ಸುಕ್ಷೇತ್ರ ದೇವಗಿರಿಯನ್ನು ಪ್ರವಾಸಿ ತಾಣವಾಗಿಸುವ ಕುರಿತು ಸಚಿವ ಎಚ್.ಕೆ. ಪಾಟೀಲರ ಜೊತೆ ಚರ್ಚಿಸಿ ಅಭಿವೃದ್ಧಿಪಡಿಸುವ ಭರವಸೆ ನೀಡಿದರು.



ಶಿವರಾಜ ಸಜ್ಜನರ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇವಗಿರಿ ಗ್ರಾಮದ ಅಭಿವೃದ್ಧಿಗೆ ತಮ್ಮ ಪ್ರಯತ್ನಕ್ಕೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ಅರ್ಪಿಸಿ, ಇದೇ ಸಹಕಾರ ಮುಂದಿನ ಅಭಿವೃದ್ಧಿ ಕಾರ್ಯಗಳಲ್ಲೂ ಜನತೆ ನೀಡಲಿ ಎಂಬ ಆಶಯ ವ್ಯಕ್ತಪಡಿಸಿದರು.

> ಇದೇ ಸಂದರ್ಭದಲ್ಲಿ ಶ್ರೀ ಗುರು ಪುಟ್ಟರಾಜ ಪುರಸ್ಕಾರವನ್ನು ನಾಗಲಿಂಗಯ್ಯ ವಸ್ತ್ರದಮಠ (ಗಾನಶ್ರೀ), ಶಂಕರ ಕಬಾಡಿ (ವಾದನ ಶ್ರೀ), ಐ.ಕೆ.ಕಮ್ಮಾರ (ಸಾಹಿತ್ಯಶ್ರೀ), ಅಶೋಕ ಬಸ್ತಿ (ರಂಗಶ್ರೀ), ಚನ್ನವೀರಯ್ಯಶಾಸ್ತ್ರಿ ಹಿರೇಮಠ (ಕೀರ್ತನಶ್ರೀ) ಪ್ರದಾನ ಹಾಗೂ ಡಾ. ಎಸ್.ಬಿ. ಶೆಟ್ಟರ ಮತ್ತು ಪೂಜ್ಯರ ಕಂಚಿನ ಪುತ್ತಳಿಯ ಶಿಲ್ಪಿ ಬಿ.ಸಿ. ಶಿವಕುಮಾರ ಇವರಿಗೆ 'ವೈದ್ಯ ಶ್ರೀ-ಶಿಲ್ಪ ಶ್ರೀ' ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು.

ಬಾಲ ಪ್ರತಿಭೆ ಉಮಾಶ್ರೀ ಗಡ್ಡದಿಮಠ, ಗಾಯತ್ರಿ ಹಿರೇಮಠ, ಚರಣ ಗಡ್ಡದಮಠ, ಪಂಚಾಕ್ಷರಿ ಹಿರೇಮಠರಿಂದ ಗಾಯನ, ದೇವಗಿರಿ ಎಲ್ಲಾಪುರ ಗ್ರಾಮಗಳ ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಜಿ. ಸುರಭಿ ಸುರೇಶರ ಗಾಯನ, ಸೃಷ್ಟಿ ಸುರೇಶ ಸಿತಾರ ವಾದನ, ಗಿರಿಮಲ್ಲಿಕಾ ಮಾಂತ, ಸೃಷ್ಟಿ ಕೃಷ್ಣ ಕೆ.ಮಂಗಳೂರು, ಲತಾ ಹುಲಿಕಂತಿಮಠ ಹಾಗೂ ಹರ್ಷಿತಾ ಅಚಲಕರರಿಂದ ಭರತನಾಟ್ಯ ಪ್ರದರ್ಶನ ಜರುಗಿದವು.

ಪೂಜ್ಯಶ್ರೀ ಡಾ. ವೀರೇಶ್ವರ ಶರಣರ 'ಶಿವ ಪೂಜಾ ವಿಧಿ', ಐ.ಕೆ. ಕಮ್ಮಾರರ 'ಭೂಲೋಕದ ಭಗವಂತ' ಗ್ರಂಥಗಳು ಪೂಜ್ಯ ದಿಂಗಾಲೇಶ್ವರ ಶ್ರೀಗಳಿಂದ ಬಿಡುಗಡೆಗೊಂಡವು. ವಿವಿಧ ಕ್ಷೇತ್ರಗಳ ಗಣ್ಯಮಾನ್ಯರು ಮತ್ತು ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಸುಪ್ರೀಂ ಗ್ರೂಪ್‌ನ ಪ್ರಕಾಶ್ ಪೈ ಹಾಗೂ ಫಿಲ್ಕಾನ ಸೇಲ್ಸ್-ಸರ್ವಿಸಸ್ ಇಂಡಸ್ಟ್ರಿಯ ಮಾಲಿಕ ಆರ್. ಮಲ್ಲಿಕಾರ್ಜುನ ಉಪಸ್ಥಿತರಿದ್ದರು. ಸಿದ್ದಲಿಂಗಯ್ಯಶಾಸ್ತ್ರಿ ಗಡ್ಡದಮಠ, ಕುಮಾರಸ್ವಾಮಿ ಹಿರೇಮಠ ಮತ್ತು ಶಿವಯೋಗಿ ಗಡ್ಡದಮಠ ಕಾರ್ಯಕ್ರಮ ನಿರೂಪಿಸಿದರು.

**ಬಡತನದಲ್ಲಿಯೂ ಸಮಾಜ ಸೇವೆಯ ಹಂಬಲ | ಅನಾಥರ ಸೇವೆಗೆ ಮುಂದಾದ ಬಡ ಕುಟುಂಬ**

# ಸ್ವಾರ್ಥದ ಸೋಂಕಿಲ್ಲದ ವೃದ್ಧಾಶ್ರಮ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಇಲ್ಲೊಬ್ಬ ಅತ್ಯಂತ ಬಡ ಕುಟುಂಬದ ಮಹಿಳೆ ತನ್ನ ಕುಟುಂಬಕ್ಕೆ ಭದ್ರ ನೆಲೆ, 2 ಹೊತ್ತು ನೆಮ್ಮದಿಯಿಂದ ಊಟ ಮಾಡಲಾಗದ ಬಡತನದ ಕೆಟ್ಟ ಪರಿಸ್ಥಿತಿ ಇದ್ದರೂ ಸಹ ತಾನೂ ಸೇರಿ ಪತಿ, 3 ಜನ ಪದವೀಧರ ಮಕ್ಕಳ ದುಡಿಮೆ, ಸಹಾಯ-ಸಹಕಾರದೊಂದಿಗೆ ವಯೋವೃದ್ಧರ, ನಿರ್ಗತಿಕರ, ಅನಾಥರ ಸೇವೆಯನ್ನು ಯಾವುದೇ ಪ್ರಚಾರ ಬಯಸದೇ ಮಾಡುತ್ತಿದ್ದಾರೆ. ಈ ಕಾಲದಲ್ಲೂ ಈ ರೀತಿ ನಿಸ್ವಾರ್ಥ ಸೇವೆ ಮಾಡುವ ಮತ್ತು ತಂದೆ-ತಾಯಿ ಮಾಡುವ ಕಾರ್ಯಕ್ಕೆ ಹೊಸ ತಲೆಮಾರಿನ ಮಕ್ಕಳೂ ಕೈ ಜೋಡಿಸುತ್ತಿರುವುದು ಅಪರೂಪವೇ ಸರಿ.

ಲಕ್ಷ್ಮೇಶ್ವರ ತಾಲೂಕಿನ ಒಡೆಯರ ಮಲ್ಲಾಪುರ ಗ್ರಾಮದ ಮಹಿಳೆ ಲಕ್ಷ್ಮವ್ವ ಪರಮೇಶಪ್ಪ ಮೆಳ್ಳಿಗಟ್ಟಿ ಬಡತನದಲ್ಲಿಯೂ ಸಮಾಜ ಸೇವೆ ಮಾಡುವ ಹಂಬಲ ಹೊಂದಿದ್ದಾರೆ. ಸ್ವಂತ ಜಮೀನು ಇಲ್ಲ. ಪತಿಯೊಂದಿಗೆ ಕೂಲಿ ಮಾಡಿದರೆ ಮಾತ್ರ ಬದುಕು ಸಾಗಿಸಲು ಸಾಧ್ಯ. ಇಂತಹ ಸಂದರ್ಭದಲ್ಲಿಯೂ ಮೂವರು ಗಂಡು ಮಕ್ಕಳಿಗೆ ಪದವಿ ಶಿಕ್ಷಣ, ಮಗಳಿಗೆ ಹೈಸ್ಕೂಲ್ ಶಿಕ್ಷಣ ಕೊಡಿಸಿದ್ದಾರೆ. ಮನೆಯಲ್ಲಿ ಚಿಪ್ಸ್ ಮಾಡಿ ಮಾರಾಟ ಮಾಡುವುದು, ಜಾತ್ರೆ-ಹಬ್ಬಗಳ ಸಂದರ್ಭದಲ್ಲಿ ಕುರುಕಲು ತಿಂಡಿ ಮಾರಾಟ ಮಾಡಿ ಬದುಕು ಸಾಗಿಸುವ ಸಂದರ್ಭದಲ್ಲಿಯೂ ಮಕ್ಕಳ ಒತ್ತಾಯಕ್ಕೆ ಕಟ್ಟುಬಿದ್ದು ಉದ್ಯೋಗ ಮಾಡಲು ಸಾಲ ಮಾಡಿ ಟ್ರ್ಯಾಕ್ಟರ್ ಖರೀದಿಸಿದ್ದಾರೆ, ಮನೆ ಕಟ್ಟಿಕೊಂಡಿದ್ದಾರೆ. ಸಾಲ ತೀರಿಸಲಾಗದೇ ಚಿಂತೆಗೀಡಾದ ಲಕ್ಷ್ಮವ್ವ ತನ್ನ ಕಿಡ್ನಿ ಮಾರಾಟ ಮಾಡಿ ಸಾಲತೀರಿಸುವ ನಿರ್ಧಾರಕ್ಕೆ ಬಂದು ಕೊನೆಯ ಹಂತದ ಪ್ರಯತ್ನ ಮಾಡಿದ್ದಾಳೆ. ಈ ವೇಳೆ ಗ್ರಾ.ಪಂ ಸದಸ್ಯ ಪದ್ಮರಾಜ ಪಾಟೀಲ ಅವರ ಸಹಕಾರದಿಂದ ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ತಮ್ಮ ಕಷ್ಟ ಹೇಳಿಕೊಂಡಿದ್ದಾರೆ. ಆಗ ಕುಮಾರ ಸ್ವಾಮಿಯವರು ಕುಟುಂಬ ನಿರ್ವಹಣೆಗೆ 3 ಆಕಳು ಮತ್ತು ಭೂಒಡೆತನ ಯೋಜನೆಯಡಿ ಸಮೀಪದ ಶಿಗ್ಲಿ-ಬಸನಕೊಪ್ಪ ಸಮೀಪ 2.26 ಎಕರೆ ಜಮೀನು ಕೊಡಿಸಿದ್ದರು. ಇಷ್ಟೆಲ್ಲ ಕಷ್ಟದ ನಡುವೆಯೂ ಮಹಿಳೆಗೆ ಸಮಾಜಸೇವೆ ಹಂಬಲ ಮಾತ್ರ ಕುಂದಿರಲಿಲ್ಲ.



ಹಿರಿಯರು, ಅನಾಥರು, ನಿರ್ಗಗತಿಕರಿಗೆ ಸಹಾಯ ಮಾಡುವ ಕಾರ್ಯ ಮಾಡುತ್ತಾ ಬಂದಿದ್ದಾರೆ.

> ಜೀವಿತಾವಧಿಯಲ್ಲಿ ನಾವು ಮಾಡುವ ಕಾರ್ಯಗಳು, ಸೇವೆ ಅಜರಾಮರ, ಅದರಲ್ಲಿ ಸಿಗುವ ಸಂತೃಪ್ತಿ ಜೀವನ್ಮುಕ್ತಿಗೆ ರಹದಾರಿ. ನಮ್ಮ ಕುಟುಂಬದ ಜತೆಗೆ ಅನಾಥ, ನಿರ್ಗತಿಕರಿಗೆ ಅನ್ನ, ಆಶ್ರಯ ಕಲ್ಪಿಸಬೇಕೆಂಬ ನಮ್ಮ ಮತ್ತು ಹಿರಿಯರ ಆಸೆಯಂತೆ ವೃದ್ಧಾಶ್ರಮ ನಡೆಸುತ್ತಿದ್ದೇವೆ. ಇದಕ್ಕೆ ಮಕ್ಕಳೂ ಬೇಸರಿಸದೇ ನಮ್ಮ ಜೊತೆಗಿದ್ದು ಸೇವೆ ಮಾಡುತ್ತಿದ್ದಾರೆ. ವಿಧಾನಸಬೆ ಉಪಸಭಾಪತಿಗಳಾದ ರುದ್ರಪ್ಪ ಲಮಾಣಿ ಅವರು ವೃದ್ಧಾಶ್ರಮಕ್ಕೆ ಭೇಟಿ ನೀಡಿ ಶ್ಲಾಘಿಸಿದ್ದಾರೆ. ಭವಿಷ್ಯದಲ್ಲಿ ಬಡ ಅಂಗವಿಕಲ ಮಕ್ಕಳನ್ನು ಜೋಪಾನ ಮಾಡುವ ಉದ್ದೇಶ ಹೊಂದಿದ್ದೇವೆ. ಈ ಕಾರ್ಯದಲ್ಲಿ ಯಾವುದೇ ಆಸೆ-ದುರುದ್ದೇಶವಿಲ್ಲ.
>
> **– ಲಕ್ಷ್ಮವ್ವ-ಪರಮೇಶಪ್ಪ** ದಂಪತಿಗಳು.



ಭೂಒಡೆತನ ಯೋಜನೆಯಡಿ ಪಡೆದ ಜಮೀನಿನಲ್ಲಿಯೇ ತಗಡಿಗ ಶೆಡ್‌ನಲ್ಲಿ 2 ವರ್ಷದಿಂದ ವೃದ್ಧಾಶ್ರಮ ನಡೆಸುತ್ತಿದ್ದಾರೆ. ಸರ್ಕಾರ ಮತ್ತು ಯಾರೊಬ್ಬರ ಸಹಾಯವಿಲ್ಲದೇ ತಮ್ಮ ಕುಟುಂಬದ ಕೂಲಿ ಹಣ ಮತ್ತು ಜಮೀನಿನ ಆದಾಯದಿಂದಲೇ ವೃದ್ಧಾಶ್ರಮ ಸಾಗುತ್ತಿದೆ. ಪತಿಯ ತಂದೆ ಅಂದರೆ ಮಾವನವರ ಆಸೆಯಂತೆ ಶಿವಪ್ಪನಾಯಕ ಮಹಿಳಾ ವಿವಿದೋದ್ದೇಶಗಳ ಸಂಸ್ಥೆಯಡಿ 'ತಂದೆಯ ಕನಸು' ಹೆಸರಿನಲ್ಲಿ ನಡೆಸುತ್ತಿರುವ ವೃದ್ಧಾಶ್ರಮದಲ್ಲಿ ಅನಾಥ, ನಿರ್ಗತಿಕ, ಅಸಹಾಯಕರಾದ 6 ಜನ ವೃದ್ಧರು ಆಶ್ರಯ ಪಡೆದಿದ್ದಾರೆ. ಬಸನಕೊಪ್ಪ, ಶಿಗ್ಲಿ, ಲಕ್ಷ್ಮೇಶ್ವರ, ಕೊಕ್ಕಗೊಂದಿ, ಬೂದಿಹಾಳ ಗ್ರಾಮದ 6 ಜನ ವೃದ್ಧರ ಸೇವೆಯನ್ನು ಕುಟುಂಬಸ್ಥರು ಮಾಡುತ್ತಿದ್ದಾರೆ. ಇದರ ಜೊತೆಗೆ ಒಡೆಯರ ಮಲ್ಲಾಪುರ ಗ್ರಾಮದಲ್ಲಿ ಶಿವಲಿಂಗ ಪ್ರತಿಷ್ಠಾಪನೆ ಮಾಡಿ ಶಿವರಾತ್ರಿ ದಿನ ವಿಶೇಷ ಆಚರಣೆ ಮಾಡುತ್ತಾರೆ.

> ನನಗೀಗ 80 ವರ್ಷ ವಯಸ್ಸು. ನನ್ನ ಕುಟುಂಬದವರೇ ನನ್ನನ್ನು ನಿರ್ಲಕ್ಷಿಸಿದ್ದರೂ ಲಕ್ಷ್ಮವ್ವ ಮೆಳ್ಳಿಗಟ್ಟಿ ಮತ್ತು ಅವರ ಪತಿ ಪರಮೇಶಪ್ಪ ಅವರ ಮೂವರು ಮಕ್ಕಳು ನನ್ನನ್ನು ತನ್ನ ಕುಟುಂಬದ ಹಿರಿಯಜ್ಜಿಯ ರೀತಿಯಲ್ಲಿ ಜೋಪಾನ ಮಾಡುತ್ತಿದ್ದಾರೆ. ಲಕ್ಷ್ಮವ್ವನ ಸಮಾಜ ಸೇವೆಗೆ ಸರಕಾರ, ಜನಪ್ರತಿನಿಧಿಗಳು ಕೈ ಜೋಡಿಸಬೇಕು. ಹೊಲದಲ್ಲಿಯೇ ಇರುವ ತಗಡಿನ ವೃದ್ಧಾಶ್ರಮ ಕಟ್ಟಡವಾಗಬೇಕು.
>
> **– ತಾಯವ್ವ ಕಿತ್ತೂರ.**
> ಆಶ್ರಯ ಪಡೆದ ವೃದ್ಧೆ.

## ಮತದಾನ ಜಾಗೃತಿ ಕಾರ್ಯಕ್ರಮ



**■ ವಿಜಯಸಾಕ್ಷಿ ಸುದ್ದಿ, ಗದಗ**

ನೆಹರು ಯುವ ಕೇಂದ್ರ ಗದಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಖಗಿಇಇಕ ಸಮಿತಿ ಗದಗ ಮತ್ತು ಶ್ರೀ ಸಹಸ್ರಾರ್ಜುನ್ ಶಿಕ್ಷಣ ಮಹಾವಿದ್ಯಾಲಯ, ಲಕ್ಷ್ಮೇಶ್ವರ ಇವರ ಸಂಯುಕ್ತ ಆಶ್ರಯದಲ್ಲಿ ಮತದಾರರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನೆಹರು ಯುವ ಕೇಂದ್ರದ ಜಿಲ್ಲಾ ಯುವ ಸಮನ್ವಾಧಿಕಾರಿ ಎನ್.ರಂಜನಿ ಮಾತನಾಡಿ, ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿ ವೀರೇಂದ್ರಗೌಡ ಪಾಟೀಲ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಆರ್.ಎಮ್. ಅಂಗಡಿ ಮತದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸವನ್ನು ಯುವ ಜನತೆ ಮಾಡಬೇಕು ಎಂದು ತಿಳಿಸಿದರು.

ಬಸಮ್ಮ ಪಾಟೀಲ್ ಪ್ರಾರ್ಥಿಸಿದರೆ, ಪ್ರವೀಣ್ ಮ್ಯಾಗೇರಿ ಸ್ವಾಗತಿಸಿದರು. ವಂದನಾರ್ಪಣೆಯನ್ನು ವಸಂತಕುಮಾರ್ ನೆರವೇರಿಸಿದರು. ಗದಗ ಜಿ.ಪಂ ಸಿಬ್ಬಂದಿ ವರ್ಗ ಮತ್ತು ಕಾಲೇಜಿನ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿಯ ಪದಾಧಿಕಾರಿಗಳ ಆಯ್ಕೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತೋಂಟದಾರ್ಯ ಮಠದ 2024ನೇ ಸಾಲಿನ ಜಾತ್ರಾ ಮಹೋತ್ಸವ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ತೋಂಟದಾರ್ಯ ಕಲ್ಯಾಣಕೇಂದ್ರದಲ್ಲಿ ನಡೆದ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಶ್ರೀಮಠದ ಸದ್ಭಕ್ತರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಸಮ್ಮುಖದಲ್ಲಿ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು.

ನೂತನ ಅಧ್ಯಕ್ಷರಾಗಿ ನಿವೃತ್ತ ಪ್ರಾಚಾರ್ಯ ಪ್ರೊ.ಕೆ.ಎಚ್. ಬೇಲೂರ, ಉಪಾಧ್ಯಕ್ಷರಾಗಿ ನ್ಯಾಯವಾದಿಗಳು ಹಾಗೂ ಎಡೆಯೂರು ಕಮಿಟಿ ಮಾಜಿ ಅಧ್ಯಕ್ಷರಾದ ಶ್ರೀದೇವಿ ಶೆಟ್ಟರ್, ವರ್ತಕರಾದ ಶಿವಯ್ಯ ನಾಲ್ವತ್ವಾಡಮಠ, ಅಮರೇಶ ಚಾವಿ ಹಾಗೂ ಕಾರ್ಯದರ್ಶಿಯಾಗಿ ಪ್ರವೀಣ ವಾರಕರ, ಸಹ ಕಾರ್ಯದರ್ಶಿಯಾಗಿ ಬರಕತ್‌ಅಲಿ ಮುಲ್ಲಾ, ಗವಿಸಿದ್ಧಪ್ಪ ಗಾಣಿಗೇರ, ಸಂಘಟನಾ ಕಾರ್ಯದರ್ಶಿಗಳಾಗಿ ತಿಮ್ಮರಡ್ಡಿ ಕೋನರಡ್ಡಿ, ಕೋಶಾಧ್ಯಕ್ಷರಾಗಿ ವಿಶ್ವನಾಥ ಹಳ್ಳಿಕೇರಿ, ಸಹ ಕೋಶಾಧ್ಯಕ್ಷರಾಗಿ ಅಜಯ ಮುನವಳ್ಳಿ ಆಯ್ಕೆಯಾದರು.



> ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್.ಎಸ್ ಪಟ್ಟಣಶೆಟ್ಟರ ಸರ್ವರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಳೆದ ಸಾಲಿನ ಜಾತ್ರಾ ಮಹೋತ್ಸವದ ಕೋಶಾಧ್ಯಕ್ಷರಾದ ಉಮೇಶ ನಾಲ್ವಾಡ ಲೆಕ್ಕಪತ್ರ ಮಂಡಿಸಿದರು. ಕಳೆದ ಸಾಲಿನ ಜಾತ್ರಾ ಸಮಿತಿ ಅಧ್ಯಕ್ಷರಾದ ಡಾ. ಎಸ್.ಬಿ. ಶೆಟ್ಟರ್, ಡಾ. ಅನಂತ ಶಿವಪೂರ, ಎಂ.ಸಿ. ಐಲಿ, ಎಸ್.ಎನ್. ಬಳ್ಳಾರಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಕೆ.ಎಸ್. ಚಟ್ಟಿ, ಎಸ್.ಎಸ್. ಶೆಟ್ಟರ್, ಎಸ್.ಎಸ್. ಪಾಟೀಲ, ಎಸ್.ಎಸ್. ಕಳಸಾಪೂರ, ಬಾಲಚಂದ್ರ ಭರಮಗೌಡರ, ಸಿದ್ಧಣ್ಣ ಬಂಗಾರಶೆಟ್ರ, ವಿವೇಕಾನಂದಗೌಡ ಪಾಟೀಲ, ಕಳೆದ ಸಾಲಿನ ಜಾತ್ರಾ ಸಮಿತಿಯ ಪದಾಧಿಕಾರಿಗಳು, ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ, ಎಂ.ಎಸ್. ಅಂಗಡಿ, ಎಲ್.ನಾರಾಯಣಸ್ವಾಮಿ, ಎಸ್.ಟಿ. ಪಾಟೀಲ, ಗಂಗಾಧರ ಹಿರೇಮಠ, ಅಮರೇಶ ಅಂಗಡಿ, ಜಿ.ಬಿ. ಪಾಟೀಲ, ಎಸ್.ಎಸ್. ಕವಳಿಕಾಯಿ, ವಿರುಪಣ್ಣ ಬಳ್ಳೊಳ್ಳಿ ಮುರುಗೇಶ ಬಡ್ನಿ, ಅನಿಲಕುಮಾರ ಬೆಳದಡಿ, ಸಿದ್ಧಲಿಂಗೇಶ ಚಳಗೇರಿ, ಮದರಿಮಠ ಸೇರಿದಂತೆ ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು. ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಆಶೀರ್ವದಿಸಿದರು.

## ಹಿರೇದುರ್ಗಾದೇವಿ ಜಾತ್ರಾ ಮಹೋತ್ಸವ



**■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಇಲ್ಲಿನ ಗ್ರಾಮ ದೇವತೆ ದುರ್ಗಾದೇವಿ ಜಾತ್ರಾ ಮಹೋತ್ಸವದಲ್ಲಿ ಗುರುವಾರ ಬೆಳಿಗ್ಗೆ ಸದ್ಭಕ್ತರು ಶ್ರದ್ಧಾ-ಭಕ್ತಿಯಿಂದ ದೇವಿಯ ಅಗ್ನಿಕುಂಡದಲ್ಲಿ ನಡೆದು ಭಕ್ತಿಯ ಪರಕಾಷ್ಠೆ ಮೆರೆದರು. ಇಂತಹ ದೈವಿ ಆಚರಣೆಗಳು ಅಪರೂಪವೆನಿಸಿದರೂ ನಗರ ಹಾಗೂ ಗ್ರಾಮದ ಜನತೆ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ದೂರಗೊಳಿಸಲು ದೇವಿಯ ಬಳಿ ಹರಕೆ ಹೊತ್ತು ತಮ್ಮ ದುಃಖವನ್ನು ಹೇಳಿಕೊಂಡು ಪರಿಹರಿಸುವಂತೆ ಅಗ್ನಿಕುಂಡ ಹಾಗೂ ಮಡಿಕೆಯನ್ನು ಒಲೆಯ ಮೇಲಿರಿಸಿ ಬಿಸಿ ಅಕ್ಕಿ ಪಾಯಿಸದಲ್ಲಿ ಕೈ ಹಾಕಿ ತಿರುವುದು ಭಕ್ತರ ಭಕ್ತಿಯು ಇಮ್ಮಡಿಗೊಳಿಸುವಂತೆ ಮಾಡುತ್ತದೆ.

ಆರಂಭದಲ್ಲಿ ದುರ್ಗಾ ದೇವಿಯನ್ನು ವಿಶೇಷವಾಗಿ ಪೂಜಿಸಿದ ನಂತರ ಹೂಗಳಿಂದ ಶೃಂಗರಿಸಿ, ರಂಗು-ರಂಗಿನ ರಂಗೋಲಿಯ ಚಿತ್ತಾರಗಳ ಬಿಡಿಸಿದ ಅಗ್ನಿಕುಂಡದಲ್ಲಿ ಪಾಲ್ಗೊಳುವ ಭಕ್ತರು ದೇವಿಯಲ್ಲಿ ವಿಶೇಷ ಹರಕೆಹೊತ್ತು ಬೆಳಿಗ್ಗೆ ಮಡಿಸ್ನಾನ ಮಾಡಿದ ಬಳಿಕ ಸಕಲವಾದ್ಯ ವೈಭವಗಳೊಂದಿಗೆ ಮೀಸಲು ನೀರನ್ನು ತಂದು ಮಡಿಕೆಯಲ್ಲಿ ಹಾಕಿ ಅಗ್ನಿಕುಂಡ ಪ್ರವೇಶಿಸುತ್ತಾರೆ. ನಂತರ ಅಗ್ನಿಕುಂಡ ಪ್ರದಕ್ಷಣೆ ಹಾಕುವ ಮೂಲಕ ಅಗ್ನಿಕುಂಡದಲ್ಲಿ ನಡೆದಾಡಿ ತಮ್ಮ ಇಷ್ಟಾರ್ಥಗಳ ಈಡೇರಿಕೆಗಾಗಿ ದೇವಿಯ ಹರಿಕೆ ತೀರಿಸಿದರು.

ಭಕ್ತರು ದೇವಿಯಲ್ಲಿ ನಂಬಿಕೆಯನ್ನಿಟ್ಟು ಭಕ್ತಿಯಿಂದ ನಮಸ್ಕರಿಸಿ ತಮ್ಮ ಕಷ್ಟ ಪರಿಹರಿಸು ಎಂದು ಬೇಡಿಕೊಳ್ಳುವ ಪ್ರತಿಬಿಂಬವೇ ಈ ಅಗ್ನಿಕುಂಡದ ಪ್ರವೇಶ ಎಂಬುದು ಭಕ್ತರ ಮಾತಾಗಿದೆ. ಇಂತಹ ದೈವಿ ಆಚರಣೆಗೆ ನೆರೆಯ ರಾಜ್ಯದ ಭಕ್ತರೂ ತಂಡೋಪತಂಡವಾಗಿ ಹರಿದು ಬಂದಿದ್ದು ದುರ್ಗಾದೇವಿ ಜಾತ್ರಾ ಮಹೋತ್ಸವದ ವಿಶೇಷವಾಗಿತ್ತು.

## ಶಿವರಾತ್ರಿಯ ನಿಮಿತ್ತ ವಿಶೇಷ ಪೂಜೆ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**



ಪಟ್ಟಣದ ಐತಿಹಾಸಿಕ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ನಿಮಿತ್ತ ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಪೂಜೆ, ಜಲಾಭಿಷೇಕ, ರಾತ್ರಿ 9 ಗಂಟೆಯಿಂದ (ಯಾಮಪೂಜೆ) ಲಘುರುದ್ರಾಭಿಷೇಕ ನಡೆಯಲಿದೆ. 11 ಜನ ಋತ್ವಿಜರು ಈ ಯಾಮಪೂಜೆಯನ್ನು ಮಧ್ಯರಾತ್ರಿಯವರೆಗೂ ನಡೆಸಲಿದ್ದು, ಬೆಳಗಿನವರೆಗೂ ಜಲಾಬಿಷೇಕ ನಡೆಯಲಿದೆ ಎಂದು ಅರ್ಚಕರಾದ ಸೋಮನಾಥ ಪೂಜಾರ ತಿಳಿಸಿದ್ದಾರೆ.

ಅದರಂತೆ ಪಟ್ಟಣದ ಈಶ್ವರಿಯ ವಿಶ್ವವಿದ್ಯಾಲಯದಲ್ಲಿ 88ನೇ ತ್ರಿಮೂರ್ತಿ ಶಿವ ಜಯಂತಿ ಮಹಾಶಿವರಾತ್ರಿ ಉತ್ಸವದ ಅಂಗವಾಗಿ 5 ಅಡಿ ಎತ್ತರದ ವೈವಿಧ್ಯಮಯ ಅಲಂಕಾರದಲ್ಲಿ ಶ್ವೇತ ಶಿವಲಿಂಗ ದರ್ಶನ, ಕ್ಷೀರಾಭಿಷೇಕ ನಡೆಯಲಿದೆ. ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಶಿವಧ್ವಜಾರೋಹಣ ಮತ್ತು 21 ಶಿವಲಿಂಗಗಳ ಶಾಂತಿಯಾತ್ರೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ.

ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಶಿವಲಿಂಗಗಳಿಗೆ ವಿಶೇಷ ಪೂಜೆ, ಪ್ರಾತಃಕಾಲ ಶ್ರೀ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣ, ಲಿಂ. ವೀರಗಂಗಾಧರ ಜಗದ್ಗುರುಗಳ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳಿಗ್ಗೆ 9ಕ್ಕೆ ಶಿವದೀಕ್ಷೆ, ಅಯ್ಯಾಚಾರ ಜರುಗುವುದು. ಸಂಜೆ 5ಕ್ಕೆ ಜ. ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿ ನಿಮಿತ್ತ ರಥೋತ್ಸವ ಜರುಗುವುದು. ರಾತ್ರಿ ಮಾನವ ಧರ್ಮ ಮಂಟಪದಲ್ಲಿ ಜ.ರೇಣುಕಾಚಾರ್ಯರು, ಶ್ರೀ ಜಗದ್ಗುರುಗಳವರ ಮಂಗಳಮೂರ್ತಿಗೆ ಮಹಾರುದ್ರಾಭಿಷೇಕ, ಪಟ್ಟಾಧ್ಯಕ್ಷರ ಸಡಗರದ ಮಹಾಶಿವಪೂಜೆ, ನಾಮಸ್ಮರಣೆ ಜರುಗಲಿದೆ.

## ವಿದ್ಯಾರ್ಥಿ ಜೀವನದಲ್ಲಿ ಉನ್ನತ ಗುರಿ ಹೊಂದಿ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಿದ್ಯೆ ಯಾರ ಸ್ವತ್ತು ಅಲ್ಲ. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ, ನಿಷ್ಠೆಯಿಂದ ಸಾಧನೆ ಮಾಡುವ ಗುರಿ ಹೊಂದುವ ಪ್ರತಿಯೊಬ್ಬರೂ ಉತ್ತಮ ವಿದ್ಯಾವಂತರಾಗಬಹುದು. ಉನ್ನತ ಗುರಿ, ಸತತ ಅಭ್ಯಾಸ, ಕಠಿಣ ಪರಿಶ್ರಮ ಇವು ಸಾಧನೆಗೆ ರಹದಾರಿಯಾಗಿವೆ ಎಂದು ಹಿರಿಯ ಸಾಹಿತಿ ಪ್ರೊ.ನೀಲಗಿರಿ ತಳವಾರ ಹೇಳಿದರು.

ಅವರು ತಾಲ್ಲೂಕಿನ ಒಡೆಯರಮಲ್ಲಾಪುರ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜರುಗಿದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನ ಒಂದು ಮಹತ್ವದ ಘಟ್ಟವಾಗಿದ್ದು, ಶಿಸ್ತು, ಪ್ರಾಮಾಣಿಕತೆ ಬೆಳೆಸಿಕೊಳ್ಳುವದು ಅವಶ್ಯವಾಗಿದೆ. ಇಂದು ನೀವು ವಿದ್ಯಾಭ್ಯಾಸಕ್ಕೆ ಪಡುವ ಶ್ರಮ ಮುಂದಿನ ಒಳ್ಳೆಯ ದಿನಗಳ ನಿಮಗಾಗಿ ಕಾಯುತ್ತಿರುತ್ತವೆ ಎನ್ನುವದನ್ನು ಮನದಟ್ಟು ಮಾಡಿಕೊಳ್ಳಬೇಕು. ಉತ್ತಮ ನಾಗರಿಕರಾಗಿ ದೇಶ ಸೇವೆ ಮಾಡುವ ನಿಟ್ಟಿನಲ್ಲಿ ಎಲ್ಲರೂ ಸಾಗಬೇಕೆಂದು ಕರೆನೀಡಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶರಣಯ್ಯ ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿಗಳಾದವರಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ಅವಶ್ಯ. ಇಂದು ಸರಕಾರಗಳು ಅನೇಕ ಯೋಜನೆಗಳನ್ನು ಶಿಕ್ಷಣಕ್ಕಾಗಿ ನೀಡುತ್ತಿವೆ. ಬಡ-ಮದ್ಯಮ ವರ್ಗದ ಜನರು ಇಂತಹ ಸೌಲಭ್ಯಗಳನ್ನು ಪಡೆದಕೊಂಡು ಉತ್ತಮ ವಿದ್ಯೆ ಪಡೆಯುವ ನಿಟ್ಟಿನಲ್ಲಿ ಯೋಚಿಸಬೇಕು ಎಂದರು.

ಪ್ರಾಚಾರ್ಯ ಡಿ.ಸಿ. ನರೇಗಲ್ಲ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕು ಘಟಕದ ಅಧ್ಯಕ್ಷ ಈಶ್ವರ ಮೆಡ್ಲೇರಿ, ನಾಗರಾಜ ಹಣಗಿ, ಯಲ್ಲಪ್ಪ ತಳವಾರ, ಜ್ಯೋತಿ ಗಾಯಕವಾಡ, ಎಸ್.ಎನ್. ತಳ್ಳಳ್ಳಿ, ರೂಪಾ ಮನ್ನಂಗಿ ಮತ್ತು ಅರ್ಜುನ ವಠಾರ ಇದ್ದರು.


ಕರ್ನಾಟಕ ಸರಕಾರ

**ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಗದಗ**

**ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ ಕಿ.ಇಂ/ಟೆಂಡರ್/2023–24/1490 ದಿನಾಂಕ: 07.03.2024**

**ಟೆಂಡರ ಪ್ರಕಟಣೆ**

ಪಂಚಾಯತ ರಾಜ್ ಇಂಜನೀಯರಿಂಗ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು "ಇ ಪ್ರೊಕ್ಯುರಮೆಂಟ್" ಮುಖಾಂತರ ಕರೆಯಲಾಗಿದೆ.

| ಕ್ರ. ಸಂ | ಇಂಡೆಂಟ್ ಸಂಖ್ಯೆ ಕಾಮಗಾರಿ ಹೆಸರು | ಟೆಂಡರಗಿಟ್ಟ ಅಂದಾಜು ಮೊತ್ತ (ರೂ ಲಕ್ಷ) | ಮುಂಗಡ ಠೇವಣಿ ಮೊತ್ತ (ರೂ ಲಕ್ಷ) |
|---|---|---|---|
| 1. | **RWSSD/2023-24/CT/WORK_ INDENT7126/CALL-5** | 9.85 | 0.25 |

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್ " ವೆಬ್ಸೈಟ್ https:// kppp.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ:8.3.2024, ಪ್ರಶ್ನೋತ್ತರದ ಕೊನೆಯ ದಿನಾಂಕ :14.3.2024 ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:16.3.2024 ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ:18.3.2024 ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ: 20.3.2024.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ.


ವಾ.ಸಾ.ಇ./ಗದಗ/624/
ದೇಶಪಾಂಡೆಪಬ್ಲಿಸಿಟಿ/2023–24


## ಶಿವರಾತ್ರಿ ಹಬ್ಬದ ಪ್ರಯುಕ್ತ ವ್ಯಾಪಾರ ಜೋರು

**■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಗುರುವಾರ ಪಟ್ಟಣದ ಮಾರುಕಟ್ಟೆಗಳಲ್ಲಿ ಖರೀದಿಯ ಭರಾಟೆ ಜೋರಾಗಿ-ತ್ತು. ಶಿವನಿಗೆ ಬೇಕಾದ ಹೂವು, ಹಣ್ಣು ಸೇರಿಂದತೆ ನಾನಾ ವಸ್ತುಗಳ ಖರೀದಿಯಲ್ಲಿ ಜನತೆ ನಿರತರಾಗಿದ್ದರು.

ಶಿವನ ದೇವಾಲಯಗಳು ವಿಶೇಷ ಪೂಜೆ ಹಾಗೂ ಧಾರ್ಮಿಕ ಆಚರಣೆಗಳಿಗಾಗಿ ಸಜ್ಜಾಗಿದ್ದು, ಇದರ ಜೊತೆಗೆ ಮಾರುಕಟ್ಟೆಗಳಲ್ಲಿ ಹಬ್ಬದ ಸಾಮಾಗ್ರಿಗಳು ಸಾಕಷ್ಟು ಬಂದಿವೆ. ಬೇಡಿಕೆ ಹೆಚ್ಚಾದ ಹಿನ್ನೆಲೆಯಲ್ಲಿ ಮಲ್ಲಿಗೆ ಹೂವು, ಕನಕಾಂಬರ ಹಾಗೂ ಕಾಕಡ ಹೂವಿನ ಬೆಲೆ ಹೆಚ್ಚಾಗಿದ್ದು, ವರ್ತಕರು ಅಂಗಡಿಗಳ ಮುಂದೆ ಹಣ್ಣಿನ ವ್ಯಾಪಾರ ನಡೆಸಿದರು.



ಸಮೀಪದ ಕಾಲಕಾಲೇಶ್ವರ ದೇಗುಲ ಹಾಗೂ ಪಟ್ಟಣದ ವಿರೂಪಾಕ್ಷೇಶ್ವರ, ಮಾರ್ಕಂಡೇಶ್ವರ, ರಾಮಲಿಂಗೇಶ್ವರ ಮತ್ತು ಚಂದ್ರಮೌಳೇಶ್ವರ ದೇಗುಲವನ್ನು ಸ್ವಚ್ಛಗೊಳಿಸಿ ಶಿವರಾತ್ರಿ ಹಬ್ಬದ ದಿನ ಜಾಗರಣೆ ಮಾಡುವ ಭಕ್ತರ ಅನೂಕುಲಕ್ಕಾಗಿ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka